ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2024 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 01
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | October 2024 | Monthly




A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಪ್ರಪಂಚದ ಸ್ವಾತಂತ್ರ ಚಳುವಳಿಯ ಇತಿಹಾಸವನ್ನು ಗಮನಿಸಿದಾಗ ಭಾರತದ ಸ್ವಾತಂತ್ರ್ಯದ ಚಳುವಳ ಸುದೀರ್ಘವಾದದ್ದು. 1857ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ ಪ್ರಾರಂಭವಾಗಿ 1947 ರ ನಂತರ ಸ್ವಾತಂತ್ರ್ಯ ಚಳುವಳ ವೇಗವನ್ನು ಪಡೆಯಿತು. ಅಹಿಂಸೆಯ ತತ್ವದ ತಳಹದಿಯ ಮೇಲೆ ಪ್ರಪಂಚದಲ್ಲಿ ಸ್ವಾತಂತ್ರ್ಯ ಗಳಸಿದ ದೇಶ ಯಾವುದಾದರೂ ಇದ್ದರೆ, ಅದು ಭಾರತ ಮಾತ್ರ. ಸ್ವಾತಂತ್ರ್ಯದ ಚಳುವಳಿಯನ್ನು ಸರಿಯಾದ ದಾರಿಯಲ್ಲಿ ಸಾಗಲು ಶ್ರಮಿಸಿದ ಮಹಾತ್ಮಾ ಗಾಂಧೀಜಿಯವರು ಜನಿಸಿ 135 ವರ್ಷಗಳು ಗತಿಸಿದರೂ ಅವರು ನೀಡಿದ ತತ್ವಗಳು ಇಂದಿಗೂ ಜೀವಂತವಾಗಿವೆ. ನಮಗಷ್ಟೆ ಅಲ್ಲದೆ ದಕ್ಷಿಣ ಆಫ್ರಿಕಾವನ್ನು ಸೇರಿದಂತೆ ಪ್ರಪಂಚದ ಅನೇಕ ರಾಷ್ಟ್ರಗಳು ಗಾಂಧೀಜಿಯವರ ವಿಚಾರಧಾರೆಗಳಂದ ಪ್ರಭಾವಿತವಾಗಿವೆ. ಸ್ವಾತಂತ್ರ್ಯ ಹೋರಾಟಗಾರರಾಗಿರುವುದರ ಜೊತೆಗೆ, ಸಾಮಾಜಿಕ ಚಿಂತಕರು, ಶಿಕ್ಷಣ ತಜ್ಞರು, ಆಧ್ಯಾತ್ಮ ವ್ಯಕ್ತಿ, ಲೇಖಕ, ಪತ್ರಕರ್ತ ಹೀಗೆ ಅನೇಕ ಮುಖಗಳಂದ ಗಾಂಧೀಜಿಯವರನ್ನು ನೋಡಬಹುದು. ಇಂತಹ ಮಹಾತ್ಮರ ಜನ್ಮದಿನವನ್ನು ಸಂಭ್ರಮದಿಂದ ಆಚರಿಸುತ್ತಿರುವ ನಾವುಗಳು ಅವರ ಆದರ್ಶಗಳನ್ನು ಅನುಸರಿಸುವುದರೊಂದಿಗೆ ಅವರಿಗೆ ಗೌರವ ಸೂಚಿಸಬೇಕಲ್ಲವೆ?

ಸರಳತೆಯ ಜೀವಂತ ನಿದರ್ಶನ ಲಾಲ್ ಬಹುದ್ದೂರ್ ಶಾಸ್ತ್ರೀಜಿ. ಅವರ ಜೀವನವೇ ಭಾರತೀಯರಾದ ನಮಗೆಲ್ಲ ದಾರಿ ದೀಪ. "ದೇಶ ಮೊದಲು" ಎನ್ನುವ ಮಾತಿಗೆ ಪೂರಕವಾಗಿ ಜೀವನ ಸಾಗಿಸಿದ ಶಾಸ್ತ್ರೀಜಿ ಇಂದಿನ ಮತ್ತು ಮುಂದಿನ ಪೀಳಗೆಗೆ ಬಿಟ್ಟುಹೋದ ಅವರ ಜೀವನ ಸಂದೇಶಗಳು ನಮಗೆಲ್ಲ ಪ್ರೇರಣಾದಾಯಕವಾದವುಗಳು. ಈ ಪ್ರೇರಣಾದಾಯಕ ಅಂಶಗಳನ್ನು ಶಾಸ್ತ್ರೀಜಿಯವರ ಜನ್ಮದಿನವನ್ನು ಆಚರಿಸುವುದರ ಮೂಲಕ ಮುಂದಿನ ಜನಾಂಗಕ್ಕೆ ಸಾಗಿಸೋಣ.

ಭಾರತದಲ್ಲಿ ಧರ್ಮಾಚರಣೆಯ ಅಂಗವಾಗಿ ದಸರಾ ಹಬ್ಬವನ್ನು ಮಹಾಭಾರತದ ನಂತರದ ದಿನಗಳಲ್ಲಿ ಆಚರಿಸುತ್ತಾ ಬಂದಿರುವ ನಾವುಗಳೂ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಅಂಗವಾಗಿ ಅದನ್ನು ನಾಡ ಹಬ್ಬವಾಗಿ ಅಚರಣೆಗೆ ತಂದರು ಎನ್ನುವುದನ್ನು ಇಂದಿಗೂ ಹಂಪೆಯಲ್ಲಿರುವ ಮಹಾನವಮಿ ದಿಬ್ಬ ಸಾರಿ ಹೇಳುತ್ತದೆ. ವಿಜಯ ನಗರದ ಅವಸಾನದ ನಂತರ ಕನ್ನಡ ನಾಡಿನಲ್ಲಿ ತಲೆ ಎತ್ತಿದ ಮೈಸೂರಿನ ಅರಸು ರಾಜ ಮನೆತನ ದಸರೆಯನ್ನು ನಾಡಹಬ್ಬವಾಗಿ, ಆಕರ್ಷಕವಾಗಿ ಆಚರಿಸತೊಡಗಿತು. ಇಂದಿಗೂ ಅಂದಿನ ಎಲ್ಲ ಸಂಪ್ರದಾಯಗಳೊಂದಿಗೆ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಆಚರಿಸುತ್ತಿದ್ದೇವೆ. ಕನ್ನಡ ನಾಡ ಹಬ್ಬವಷ್ಟೆ ಆಗದೆ ದೇಶ ವಿದೇಶಗಳಲ್ಲಿಯೂ ದಸರೆಯ ಕಂಪು ಹರಡಿದೆ. ದುಷ್ಟರ ಸಂಹಾರ ಶಿಷ್ಟರ ರಕ್ಷಣೆಯ ದ್ಯೋತಕವಾದ ಈ ಹಬ್ಬ ನಮಗೆಲ್ಲ ಶುಭವನ್ನು ತರಲಿ. ದೇಶ ಪ್ರಪಂಚದಲ್ಲಿ ಬಲಿಷ್ಠವಾಗಿ ಹೊರ ಹೊಮ್ಮುತ್ತಿರುವ ಈ ಸಂದರ್ಭದಲ್ಲಿ ಭಾರತದಿಂದ ಪ್ರಪಂಚದಲ್ಲಿ ಶಾಂತಿ ಲಭಿಸಲಿ ಎಂದು ನಾವೆಲ್ಲ ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸೋಣ.

ರಾಮಾಯಣವನ್ನು ನಮಗೆಲ್ಲ ನೀಡಿದ ವಾಲ್ಮೀಕಿ ಮಹರ್ಷಿಯಿಂದ ನಾವೆಲ್ಲ ಕಲಿಯಬೇಕಾದದ್ದು ಸಾಧನೆಗೆ ತಡೆಯೊಡ್ಡಲು ಯಾರಿಂದಲೂ ಸಾಧ್ಯವಿಲ್ಲ. ವಾಲ್ಮೀಕಿ ಮಹರ್ಷಿಯ ಜಯಂತಿಯನ್ನು ಆಚರಿಸುತ್ತಿರುವ ನಾವುಗಳೆಲ್ಲ ಅವರ ಸಂದೇಶಗಳನ್ನು ಪಾಲಿಸುವುದು ನಮ್ಮ ಕರ್ತವ್ಯ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ದಸರೆಯ ಇತಿಹಾಸ ಮತ್ತು ಸಂದೇಶ – ಹೆಚ್ ನಾಗಭೂಷಣ್ ರಾವ್ 3
- ಪೂರ್ವಸೂರಿಗಳು – ನಂ. ನಾಗಲಕ್ಷ್ಮಿ 5
- ಗಾಂಧಿ-ಶಾಸ್ತ್ರಿ, ಪ್ರಸ್ತುತತೆ – ಡಾ॥ ಲೋಕೇಶ್ 7
- ಭಾರತೀಯ ಇತಿಹಾಸದ ವಿಕೃತೀಕರಣ 8
- ದೈಹಿಕ ಪರಿಶ್ರಮ – ಶ್ವೇತಾದ್ರಿ 10
- ಸೃಷ್ಠಿ – ಪಿ. ಡಿ. ವಾಲೀಕಾರ 10
- ಓದುಗರ ಸ್ಪಂದನೆ 10
- ಅಭ್ಯಾಸ ವರ್ಗ – ಮಹತ್ವ – ನಾರಾಯಣ ಭಟ್ 11
- ಸಹಲ್ ಕಾರ್ಯಕ್ರಮ – ಬೆಂಗಳೂರು ಉತ್ತರ ಜಿಲ್ಲೆ 12

# ದಸರೆಯ ಇತಿಹಾಸ ಮತ್ತು ಸಂದೇಶ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



**ಇತಿಹಾಸ** : ಇಂದು ನಾವು ಕರ್ನಾಟಕದ ನಾಡಹಬ್ಬವಾಗಿ ಆಚರಿಸುತ್ತಿರುವ ದಸರಾ ಉತ್ಸವದ ಬೀಜ ಬಿತ್ತಿದ್ದು 600 ವರ್ಷಗಳ ಹಿಂದೆ ವಿಜಯನಗರ ಸಾಮ್ರಾಜ್ಯದ ರಾಜನಾಗಿದ್ದ ಎರಡನೇ ದೇವರಾಯನ ಕಾಲದಲ್ಲಿ. ಈ ಬೀಜ ಗಿಡವಾಗಿ ಮರವಾಗಿ ಬೆಳೆದು ಹೂ ಅರಳಿದ್ದು ಕೃಷ್ಣ ದೇವರಾಯನ ಕಾಲದಲ್ಲಿ. ವಿಜಯನಗರ ಸಾಮ್ರಾಜ್ಯ ಮುಸಲ್ಮಾನರ ದಾಳಿಯಿಂದ ಪತನವಾದ ನಂತರ ಈ ಪರಂಪರೆಯನ್ನು ಮೈಸೂರಿನ ರಾಜರಾದ ರಾಜಒಡೆಯರು 1610 ರಲ್ಲಿ ಮುಂದುವರೆಸಿದರು. ರಾಜವಂಶದ ಆಡಳಿತ ಕೊನೆಗೊಂಡು ಪ್ರಜಾಪ್ರಭುತ್ವದ ಶಾಸನ ವ್ಯವಸ್ಥೆ ಬಂದ ನಂತರವೂ ಕರ್ನಾಟಕದಲ್ಲಿ ಇದನ್ನು ನಾಡಹಬ್ಬವಾಗಿ ಆಚರಿಸುವ ಪದ್ಧತಿ ಜಾರಿಗೆ ಬಂದಿದೆ.

**ಸಂದೇಶ** : ದಸರಾ ಕೇವಲ 10 ದಿನಗಳ ಒಂದು ಹಬ್ಬ ಮಾತ್ರವೇ ಅಲ್ಲ. ಇದರ ಹಿಂದೆ ಒಂದು ಮಹತ್ವದ ಸಂದೇಶವಿದೆ. ಯುಗ ಯುಗಗಳಿಂದ ನಮ್ಮದು ಧರ್ಮ ಪ್ರಧಾನವಾದ ದೇಶ. ಧರ್ಮವಿದ್ದೆಡೆ ಅಧರ್ಮವೂ ತಾಂಡವವಾಡುತ್ತದೆ. ಆಗ ಧರ್ಮವನ್ನು ರಕ್ಷಿಸಿ ಅಧರ್ಮವನ್ನು ನಾಶಮಾಡುವುದೇ ಆ ಸಂದೇಶ. ಸಹಸ್ರಾರು ವರ್ಷಗಳಿಂದ ಈ ಕೆಲಸ ನಡೆದುಕೊಂಡು ಬರುತ್ತಿದೆ. ಕಾಲ ಕಾಲದಲ್ಲಿ ಅಸುರ (ರಾಕ್ಷಸರು) ರಿಂದ ಆಕ್ರಮಣಗಳಾದಾಗ ದೇವಾಸುರರ ಯುದ್ಧ ನಡೆಯುತ್ತಿತ್ತು. ವೃತ್ತಾ ಸುರನನ್ನು ಸಂಹರಿಸಲು ಇಂದ್ರನಿಗೆ ದಧೀಚಿ ಮಹರ್ಷಿಯ ತನ್ನ ಬೆನ್ನುಮೂಳೆಯನ್ನೇ ದಾನ ನೀಡಿದ. ಇದರಿಂದ ಆ ಸುರನನ್ನು ಸಂಹರಿಸಬಲ್ಲ ವಜ್ರಾಯುಧವನ್ನು ತಯಾರಿಸಿ ಇಂದ್ರನನ್ನು ಅಧರ್ಮಿ ವೃತ್ತಾಸುರನನ್ನು ಸಂಹರಿಸಿ ಧರ್ಮವನ್ನು ಉದ್ಧರಿಸಿದ. ಮಹಿಷಾಸುರ, ರಕ್ತಬೀಜಾಸುರರ ಸಂಹಾರಕ್ಕಾಗಿ ಚಾಮುಂಡೇಶ್ವರಿಯ ಅವತಾರವಾಗಿ ಎಲ್ಲ ದೇವಾದಿ ದೇವತೆಗಳ ಶಸ್ತ್ರಾಸ್ತ್ರಗಳನ್ನು ಪಡೆದು ಸಿಂಹವಾಹಿನಿಯಾಗಿ ಇಬ್ಬರು ಲೋಕಕಂಟಕರಾದ ಮಹಿಷಾಸುರ ಮತ್ತು ರಕ್ತಬೀಜಾಸುರನನ್ನು ಸಂಹರಿಸಿ ಜಗತ್ತಿಗೆ ಶಾಂತಿಯನ್ನು ತಂದಳು.

ದಶಾವತಾರದ ಹಿಂದಿನ ಸಿದ್ಧಾಂತವೂ ಇದೇ ಆಗಿದೆ. ಹಿರಣ್ಯಕಶಪು, ಹಿರಣ್ಯಾಕ್ಷನನ್ನು ನಿಗ್ರಹಿಸಲು ವಿಷ್ಣುವು ನರಸಿಂಹಾವತಾರ, ವರಹಾವತಾರವನ್ನೆತ್ತಬೇಕಾಯಿತು. ರಾವಣ ಕುಂಭಕರ್ಣರನ್ನು ಸಂಹರಿಸಿ ಶಿಷ್ಟರ ರಕ್ಷಣೆಗೆ ವಿಷ್ಣು ರಾಮಾವತಾರವನ್ನೆತ್ತಿದ. ದ್ವಾಪರದಲ್ಲಂತೂ ಅಧರ್ಮಿ ಕೌರವರ ನಾಶಕ್ಕಾಗಿ ಕೃಷ್ಣನು ಪಾಂಡವ ಪಕ್ಷಪಾತಿಯಾಗಿ ಧರ್ಮವನ್ನುಳಿಸಿದ. ಅಷ್ಟೇ ಅಲ್ಲ, ಸ್ವಂತ ಸೋದರಮಾವನಾದ ಕಂಸನನ್ನು, ಜರಾಸಂಧ, ಶಿಶುಪಾಲ, ದಂತವಕ್ರರನ್ನು ಮುಂತಾದವರನ್ನು ತಾನೇ ಸಂಹರಿಸಿದ. ಕುರುಕ್ಷೇತ್ರದಲ್ಲಿ ಧರ್ಮವನ್ನು ಎತ್ತಿ ಹಿಡಿಯಲು, ಬಂಧುತ್ವದ ನೆಪವೊಡ್ಡಿ ದುಷ್ಟನಿಗ್ರಹಕ್ಕೆ ನಿರಾಕರಿಸಿದ ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದ. ಭಗವದ್ಗೀತೆಯಲ್ಲಿ ಅತಿ ಮುಖ್ಯವಾದ

**“ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
**ಅಭ್ಯುತ್ಥಾನಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥**
**ಪರಿತ್ರಾಣಾಯ ಸಾಧೂನಾಂ ವಿನಾಶಯ ಚ ದುಷ್ಕೃತಾಮ್।**
**ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ”**

ಎಂಬ ಭರವಸೆಯ ಸಂದೇಶ ನೀಡಿದ.

ಕೃಷ್ಣನ ಈ ಸಂದೇಶ ಹಿಂದೂ ಸಮಾಜಕ್ಕೆ ದಿಕ್ಸೂಚಿಯಾಯಿತು. ಚಾಣಕ್ಯನ ರೂಪದಲ್ಲಿ, ಚಂದ್ರಗುಪ್ತನಿಗೆ ಪ್ರೇರಣೆ ನೀಡಿ ದುಷ್ಟ ನಂದರನ್ನು ನಾಶಮಾಡಿ ಗುಪ್ತ ಸಾಮ್ರಾಜ್ಯ ಸ್ಥಾಪನೆಗೆ ಕಾರಣನಾದ.

ವಿದ್ಯಾರಣ್ಯರ ರೂಪದಲ್ಲಿ ಹಕ್ಕ ಬುಕ್ಕರಿಗೆ ಪ್ರೇರಣೆ ನೀಡಿ ಧರ್ಮಘಾತಕರಾದ ಯವನರನ್ನು ನಾಶಮಾಡಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣನಾದ.

ರಾಣಾ ಪ್ರತಾಪಸಿಂಹ, ಶಿವಾಜಿ, ಗುರು ಗೋವಿಂದ ಸಿಂಹರು ಮುಂತಾದವರು ಜನ್ಮತಳೆದು ಇದೇ ಧರ್ಮವನ್ನು ಎತ್ತಿಹಿಡಿಯುವುದಕ್ಕಾಗಿ ದುಷ್ಟಯವನರನ್ನು ನಾಶಮಾಡಿ ಧರ್ಮರಾಜ್ಯ ಸ್ಥಾಪನೆ ಮಾಡಿದರು.

ಭಾರತದ ಇತಿಹಾಸದುದ್ದಕ್ಕೂ ಇದೇ ರೀತಿ ಯವನರ ವಿರುದ್ಧ ಅಸಂಖ್ಯ ರಾಜರುಗಳು ಹೋರಾಟ ನಡೆಸಿದರು.

ಬ್ರಿಟಿಷರ ಆಡಳಿತ ಕಾಲದಲ್ಲೂ ವಾಸುದೇವಬಲವಂತ ಪಡಕೆ, ಭಗತ್‌ಸಿಂಗ್, ಚಂದ್ರಶೇಖರ ಆಝಾದ್, ರಾಂಪ್ರಸಾದ ಬಿಸ್ಮಿಲ್ಲಾ, ಜತೀಂದ್ರ ದಾಸ್, ಸಾವರ್ಕರ್ ಸಹೋದರರು, ಅಶ್ವಾಖುಲ್ಲಾ ಮುಂತಾದ ಅಸಂಖ್ಯ ಕ್ರಾಂತಿಕಾರಿಗಳು ಜನ್ಮತಳೆದು ಧರ್ಮ ಸ್ಥಾಪನೆಗೆಗಾಗಿ ಹೋರಾಡಿದರು.

ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮವೂ ರಾಣಿ ಲಕ್ಷ್ಮೀಬಾಯಿ, ನಾನಾಸಾಹೇಬ್, ಕುವರಂ ಸಿಂಹ ಮತ್ತು ತಾಂತ್ಯಾಟೋಪಿರವರ ಮುಂದಾಳತ್ವದಲ್ಲಿ ಇದೇ ಕಾರಣಕ್ಕಾಗಿ ನಡೆಯಿತು.

ಸ್ವಾತಂತ್ರ್ಯ ಸಂಗ್ರಾಮದ ಮುಂದಾಳುಗಳಾಗಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕ್, ಲಾಲಾ ಲಜಪತ್‌ರಾಯ, ಬಿಪಿನ್ ಚಂದ್ರಪಾಲ್, ಗಾಂಧಿ, ಸುಭಾಷ್ ಚಂದ್ರಬೋಸ್ ಮುಂತಾದವರೂ ಅಧರ್ಮಿ ಬ್ರಿಟಿಷರ ವಿರುದ್ಧ ಹೋರಾಡಿದ್ದು ಭಾರತದಲ್ಲಿ ಧರ್ಮ ಸಂಸ್ಥಾಪನೆಗಾಗಿಯೇ.

ಧರ್ಮ ಸಂಸ್ಥಾಪನೆಯ ಅರ್ಥ: ಧರ್ಮಸ್ಥಾಪನೆಯ ಅರ್ಥವೇನು? ಇದನ್ನು ರಾಜರು ಹೇಗೆ ತಮ್ಮ ಆಡಳಿತದಲ್ಲಿ ರೂಢಿಸಿಕೊಳ್ಳಬೇಕು ಎಂಬುದನ್ನು ಮಹಾಭಾರತದ “ಶಾಂತಿಪರ್ವ”ದಲ್ಲಿ ವಿಷದವಾಗಿ ಹೇಳಿದೆ. ಕುರುಕ್ಷೇತ್ರ, ಯುದ್ಧ ಮುಗಿದ ನಂತರ ಧರ್ಮಜನೂ, ಅರ್ಜುನನಂತೆ ವಿಚಲಿತನಾಗಿದ್ದನು. “ನನ್ನ ಬಂಧು ಮಿತ್ರರ ವಿನಾಶಕ್ಕೆ ನಾನೇ ಕಾರಣ, ಆದ್ದರಿಂದ ನನಗೆ ರಾಜನಾಗುವ ಅರ್ಹತೆ ಇಲ್ಲ. ಅದರ ಗೊಡವೆಯೇ ಬೇಡ” ಎಂದು ನಿರುತ್ಸಾಹಿಯಾಗಿ ಕುಳಿತನು. ಆಗ ಶ್ರೀಕೃಷ್ಣನು ಅವನನ್ನು ಸಂತೈಸಿ ಪಟ್ಟಾಭಿಷೇಕ ಮಾಡಿಸಿದನು. ನಂತರ ಯುಧಿಷ್ಠಿರನನ್ನು ಕುರಿತು “ ಮಹಾನ್ ಜ್ಞಾನಿಗಳೂ, ರಾಜ ಧರ್ಮವನ್ನು ಪರಿಪೂರ್ಣವಾಗಿ ಅರಿತವರೂ ಆದ ಭೀಷ್ಮ ಪಿತಾಮಹರು, ಉತ್ತರಾಯಣವನ್ನು ಕಾಯುತ್ತಾ ಶರಶಯ್ಯೆಯಲ್ಲಿ

**ಪುಟ 4 ಕ್ಕೆ ➢**

➢ ಪುಟ 3 ರಿಂದ.....

ಮಲಗಿದ್ದಾರೆ. ಅವರ ಬಳಿ ತೆರಳಿ ರಾಜಧರ್ಮ, ಪ್ರಜಾಧರ್ಮ ಮುಂತಾದ ರಾಜ್ಯಾಡಳಿತದ ಸಂಗತಿಗಳನ್ನು ತಿಳಿದುಕೋ" ಎಂದು ಉಪದೇಶಿಸದಿರು.

ಕೃಷ್ಣನ ಸಲಹೆಯಂತೆ ಎಲ್ಲ ಪಾಂಡವರೂ ಭೀಷ್ಮರ ಬಳಿ ತೆರಳಿ, ಅವರಲ್ಲಿ ಕ್ಷಮೆಯಾಚಿಸಿ ರಾಜ ಧರ್ಮವನ್ನು ತಿಳಿಸುವಂತೆ ಬೇಡುತ್ತಾರೆ. ಅರ್ಜುನನ ಬಾಣಗಳಿಂದ ರಕ್ತಸಿಕ್ತರಾಗಿ, ನಿಶ್ಯಕ್ತಿಯಿಂದ ಮಲಗಿದ್ದ ಭೀಷ್ಮರಿಗೆ ಕೃಷ್ಣನು ಶಕ್ತಿಯನ್ನು ಅನುಗ್ರಹಿಸಿ ನೋವನ್ನು ಕಡಿಮೆ ಮಾಡುತ್ತಾನೆ. ಭೀಷ್ಮರು ಬೋಧಿಸಿದ ಅಷ್ಟೂ ಸಂಗತಿ ಮಹಾಭಾರತದ ಶಾಂತಿಪರ್ವದಲ್ಲಿ ಅಡಕವಾಗಿದೆ. ಅದರ ಸಾರಾಂಶವೂ ಹೀಗಿದೆ.

"ಧರ್ಮ ಸಂಸ್ಥಾಪನೆ ಎಂದರೆ ರಾಜ್ಯದಲ್ಲಿ ಎಲ್ಲ ಪ್ರಜೆಗಳೂ ನೀತಿವಂತರಾಗಿದ್ದು, ತಮ್ಮ ಸ್ವಭಾವ ನಡವಳಿಕೆ ಹಾಗೂ ಕರ್ತವ್ಯವನ್ನು ಬಹುಜನರ ಹಿತಕ್ಕೆ ಅನುಗುಣವಾಗಿ ರೂಪಿಸಿಕೊಳ್ಳುವುದು. ಆಗ ಮಾತ್ರ ರಾಜ್ಯವು ಧರ್ಮರಾಜ್ಯವಾಗುತ್ತದೆ"

**ರಾಜಧರ್ಮ:** ತಮ್ಮ ಉಪದೇಶವನ್ನು ಮುಂದುವರೆಸಿದ ಭೀಷ್ಮರು "ಬಹು ಮುಖ್ಯವಾದ ರಾಜಧರ್ಮವೆಂದರೆ ತನ್ನ ಪ್ರಜೆಗಳೆಲ್ಲರ ನೆಮ್ಮದಿ, ಸುಖ, ಸಂತೋಷ ಹಾಗೂ ಎಲ್ಲ ವ್ಯವಹಾರಗಳಲ್ಲಿ, ಸತ್ಯ ಮತ್ತು ಪ್ರಾಮಾಣಿಕತೆಯನ್ನು ಕಾಪಾಡುವುದು. ತನ್ನ ಪ್ರಜೆಗಳ ಆಸ್ತಿ ಪಾಸ್ತಿಯನ್ನು ನಾಶಮಾಡದೆ, ತಾನು ಕೊಟ್ಟ ಮಾತನ್ನು ಸಮಯಕ್ಕೆ ಸರಿಯಾಗಿ ಪ್ರಾಮಾಣಿಕತೆಯಿಂದ ನೆರವೇರಿಸುವುದು. ಯಾರು ಸತ್ಯವಂತನೋ, ಧೈರ್ಯಶಾಲಿಯೋ, ಕರುಣಾಮಯಿಯೋ, ಧರ್ಮಗ್ರಂಥಗಳ ಸಾರವನ್ನು ಅರಿತಿರುವನೋ, ತನ್ನ ಆಲೋಚನೆಗಳು, ಚರ್ಚೆಗಳನ್ನು ಗೌಪ್ಯವಾಗಿ ಇಡುತ್ತಾನೋ ಮತ್ತು ತನ್ನ ಆಸೆಗಳನ್ನು, ಕೋಪವನ್ನು ಹದ್ದಿನಲ್ಲಿಟ್ಟುಕೊಂಡು, ನಾಲ್ಕೂ ಪುರುಷಾರ್ಥಗಳನ್ನು– ಧರ್ಮ , ಅರ್ಥ, ಕಾಮ, ಮೋಕ್ಷಗಳನ್ನು– ಅಂದರೆ ತನ್ನ ಹಾಗೂ ತನ್ನಲ್ಲೆ ಪ್ರಜೆಗಳ ಯೋಗಕ್ಷೇಮಕ್ಕಾಗಿ ಭೌತಿಕ, ಭಾವನಾತ್ಮಕ, ಮಾನಸಿಕ ಮತ್ತು ಆಧ್ಯಾತ್ಮಿಕ ಉನ್ನತಿಗಾಗಿ ಶ್ರಮಿಸುತ್ತಾನೋ ಅವನೇ ಉತ್ತಮ ರಾಜ (ಆಡಳಿತಗಾರ) ನಾಗಬಲ್ಲನು. ತನ್ನ ಪ್ರಜೆಗಳನ್ನು ಕಾಪಾಡಲಾಗದ, ಅವರ ಯೋಗಕ್ಷೇಮವನ್ನು ನೋಡಿಕೊಳ್ಳಲಾಗದಪಾಪಕ್ಕಿಂತ ದೊಡ್ಡ ಪಾಪ ರಾಜನಿಗಿರಲಾರದು. ಓರ್ವ ಗರ್ಭವತಿ ಮಹಿಳೆಯು ತನ್ನ ಗರ್ಭದಲ್ಲಿರುವ ಮಗುವಿನ ಕ್ಷೇಮಕ್ಕಾಗಿ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ತೊರೆಯುವಳೋ ಆ ರೀತಿ ರಾಜನೂ (ಆಡಳಿತಗಾರನೂ) ತನ್ನೆಲ್ಲ ಸ್ವಂತ ಆಸೆ ಆಕಾಂಕ್ಷೆಗಳನ್ನು ತೊರೆಯಬೇಕು. ರಾಜನಾದವನು ತನ್ನ ರಾಜ್ಯ ರಕ್ಷಣೆಗಾಗಿ ನೀರು, ಭೂಮಿ, ಕಾಡು, ಬೆಟ್ಟ– ಗುಡ್ಡಗಳು, ಮರಳುಗಾಡು, ಹಾಗೂ ಪ್ರಜೆಗಳನ್ನು ನಾಶವಾಗದಂತೆ ನೋಡಿಕೊಳ್ಳಬೇಕು. ಅದರಲ್ಲೂ ಮುಖ್ಯವಾಗಿ ಪ್ರಜಾವರ್ಗವನ್ನು, ರಾಜನಾದವನು ಯಮನಂತೆ ನ್ಯಾಯದಾನ ಮಾಡುತ್ತಾ ನ್ಯಾಯದಾನವನ್ನೂ ಕುಬೇರನಂತೆ ಸಂಪತ್ತನ್ನೂ ಸಂಗ್ರಹಿಸಿ, ಉಳಿಸಿ ಭಂಡಾರವನ್ನು ಬೆಳೆಸಬೇಕು. ರಾಜನ ಮಾತುಗಳು ಸಭ್ಯತೆಯಿಂದ ಕೂಡಿರಬೇಕು. ತನ್ನ ಸಲಹಾ ಮಂಡಲಿಯಲ್ಲೂ ತನ್ನಂತೆಯೇ ನ್ಯಾಯಪರರು, ಪ್ರಜಾಹಿತ ಚಿಂತಕರೂ, ಪ್ರಾಮಾಣಿಕರೂ, ಶೌರ್ಯವಂತರೂ ಆರೋಗ್ಯವಂತರು, ಶಿಸ್ತುಗಾರರು ಆದವರನ್ನೇ ಸೇರಿಕೊಳ್ಳಬೇಕು". ಹೀಗೆ ರಾಜ್ಯಾಡಳಿತಕ್ಕೆ, ಪ್ರಜಾರಂಜನೆಗೆ, ರಾಜ್ಯ ರಕ್ಷಣೆಗೆ ಸಂಬಂಧಿಸಿದಂತೆ ಭೀಷ್ಮರು ಅನೇಕ ಸಂಗತಿಗಳನ್ನು ಧರ್ಮಜನಿಗೆ ಉಪದೇಶಿದರು. ಕೊನೆಯದಾಗಿ ತನಗೆ ಮತ್ತೇನಾದರೂ ಸಂದೇಹವಿದ್ದರೆ ನಿಃಸಂಕೋಚವಿಲ್ಲದೆ ಕೇಳು ಎಂದರು.

## ಒಂದು ದೇಶವು ಎಂದು ಸಾಯುತ್ತದೆ?

**ಪಾಂಡವರು ವನವಾಸದಲ್ಲಿ ಇದ್ದಾಗ, "ಯಕ್ಷಪ್ರಶ್ನೆ" ಎಂಬ ಒಂದು ಪ್ರಸಂಗ ಬರುತ್ತದೆ. ಯಕ್ಷನು, ಯುಧಿಷ್ಠಿರನಿಗೆ ಕೇಳುವ ಒಂದು ಪ್ರಶ್ನೆ, "ಕಥೌ ರಾಷ್ಟ್ರ ಮೃತಂಭವೇತ್" ಎಂದು, ಒಂದು ರಾಷ್ಟ್ರವು ಸತ್ತಿದೆ ಎಂದು ಭಾವಿಸಬಹುದು? ಆಗ ಧರ್ಮಜನು ಕೊಟ್ಟ ಉತ್ತರ –**

**"ಮೃತಂ ರಾಷ್ಟ್ರಮರಾಜಕಂ" ಒಂದು ದೇಶದಲ್ಲಿ ಅರಾಜಕತೆ ಉಂಟಾದರೆ ಆ ದೇಶವು ಸತ್ತಂತೆಯೇ ಸರಿ.**

**ಭೀಷ್ಮನು, ಅರಾಜಕತೆ ಉಂಟಾಗದಂತೆ ನೋಡಿ ಕೊಳ್ಳುವುದು ರಾಜನ ಕರ್ತವ್ಯ ಎಷ್ಟಿದಿಯೋ, ಅಷ್ಟೇ ಪ್ರಜೆಗಳ ಜವಾಬ್ದಾರಿಯೂ ಅಷ್ಟೇ ಇರುತ್ತದೆ ಎಂದು ಉಪದೇಶಿಸುತ್ತಾನೆ.**

ಆಗ ಯುಧಿಷ್ಠರನು "ತಾತ, ರಾಜಧರ್ಮದಂತೆಯೇ ರಾಜ್ಯದಲ್ಲಿ ಇರುವ ಪ್ರಜೆಗಳಿಗೂ 'ಪ್ರಜಾಧರ್ಮ' ಎಂಬುದಿದೆಯೇ? ಇದ್ದರೆ ಅದನ್ನೂ ಸವಿಸ್ತಾರವಾಗಿ ತಿಳಿಸಿಕೊಡಿ" ಎಂದು ಪ್ರಾರ್ಥಿಸಿದನು.

ಕುರುಪಿತಾಮಹರು ಪ್ರಶ್ನೆಗೆ ಉತ್ತರಿಸುತ್ತಾ "ವತ್ಸಾ, ರಾಜ್ಯದ ಪ್ರಜೆಗಳ ಅತ್ಯಂತ ಮುಖ್ಯವಾದ ಕರ್ತವ್ಯವೆಂದರೆ ಸಾಮ್ರಾಜ್ಯವನ್ನು ರಕ್ಷಿಸಿ, ಆಡಳಿತ ನಡೆಸಬಲ್ಲ ಸಮರ್ಥರಾಜನನ್ನು ಆರಿಸಿಕೊಳ್ಳುವುದೇ ಪ್ರಜಾಧರ್ಮ. ಸಮರ್ಥನಾದ ರಾಜನಿಲ್ಲದಿದ್ದರೆ ಅಲ್ಲಿ ಅರಾಜಕತೆ ಉಂಟಾಗಿ ಆ ದೇಶದಲ್ಲಿ ನ್ಯಾಯ, ನೀತಿ, ಧರ್ಮ ವ್ಯವಸ್ಥೆ ಇದಾವುದೂ ಇರುವುದಿಲ್ಲ. ಪ್ರಜೆಗಳು ಪರಸ್ಪರ ಬಿಡಿದಾಡಿಕೊಂಡು ಸಮಾಜವನ್ನೇ ಭಗ್ನಗೊಳಿಸುತ್ತಾರೆ. ಸಮುದ್ರದಲ್ಲಿ ದೊಡ್ಡ ಮೀನು ಸಣ್ಣ ಮೀನನ್ನು ನುಂಗುವಂತೆ, ಸಮಾಜದಲ್ಲಿ ಬಲಿಷ್ಠರು ದುರ್ಬಲರನ್ನು ಹಿಂಸಿಸುತ್ತಾರೆ. ಪರಿಣಾಮವಾಗಿ ಅಂಥ ರಾಜ್ಯದಲ್ಲಿ ಡಕಾಯಿತರು, ಕಳ್ಳಕಾಕರು ಹೆಚ್ಚಾಗಿ ರಾಜ್ಯವು ಶತ್ರುಗಳ ವಶವಾಗುತ್ತದೆ. ಆದ್ದರಿಂದ ಪ್ರಜೆಗಳು ಯಾರು ತಮ್ಮನ್ನು ಧರ್ಮದ ನಿಯಮಾನುಸಾರೆ ಸಮರ್ಥವಾಗಿ ಆಳಬಲ್ಲರೋ ಅಂಥ ರಾಜನನ್ನು ಆರಿಸಿಕೊಳ್ಳುವುದು ಅತ್ಯಂತ ಅವಶ್ಯಕ. ಒಮ್ಮೆ ಅಂಥ ರಾಜನನ್ನು ಗುರುತಿಸಿದ ನಂತರ, ಅವನನ್ನು ಗೌರವಿಸುವುದು, ಆತನ ಆಜ್ಞೆಯನ್ನು ಪಾಲಿಸುವುದು, ಕಾಲ ಕಾಲಕ್ಕೆ ತೆರಿಗೆಯನ್ನು ಕಟ್ಟಿ ರಾಜ್ಯದ ಬೊಕ್ಕಸ ತುಂಬಿಸುವುದು ಹಾಗೂ ಅವನು ಸವಾಲುಗಳನ್ನು ಎದುರಿಸಬೇಕಾಗಿ ಬಂದಾಗ ಅವನ ಜತೆಜತೆಯಾಗಿ ನಿಂತು ಬೆಂಬಲ ನೀಡುವುದು, ಪ್ರಜೆಗಳ ಆದ್ಯ ಕರ್ತವ್ಯವಾಗುತ್ತದೆ. ಇದೇ ನಿಜವಾದ ಪ್ರಜಾಧರ್ಮ".

"ಒಂದು ರಾಜ್ಯದ ಅಭಿವೃದ್ಧಿಗೆ ರಾಜಧರ್ಮ ಎಷ್ಟು ಮುಖ್ಯವೋ, ಪ್ರಜಾಧರ್ಮವೂ ಅಷ್ಟೇ ಮುಖ್ಯ" ಎಂದು ತಮ್ಮ ಮಾತನ್ನು ಮುಗಿಸಿದರು. ಪಾಂಡವರೈವರ ಸಮೇತ ಕೃಷ್ಣನೂ ಭೀಷ್ಮರ ಆಶೀರ್ವಾದವನ್ನು ಪಡೆದು ನಿರ್ಗಮಿಸಿದರು.

ವಿಜಯದಶಮಿಯ ಈ ಸಂದರ್ಭದಲ್ಲಿ ನಾವೂ, ನಮ್ಮನ್ನಾಳುವವರೂ, ಎಲ್ಲ ರಾಜಕೀಯ ಮುಖಂಡರೂ ವಿಜಯದಶಮಿಯ ಈ ಸಂದೇಶವನ್ನು ಅಗತ್ಯವಾಗಿ ಮೈಗೂಡಿಸಿಕೊಳ್ಳಬೇಕು. ಇದೇ ವಿಜಯದಶಮಿಯನ್ನು ನಿಜವಾಗಿ ಆಚರಿಸುವ ರೀತಿ.

●

# ಪೂರ್ವಸೂರಿಗಳು

**ನಂ. ನಾಗಲಕ್ಷ್ಮಿ**
**ನಿವೃತ್ತ ಕನ್ನಡ ಉಪನ್ಯಾಸಕರು,**
**ಸರ್ಕಾರಿ ಪ.ಪೂ. ಕಾಲೇಜು,**
**ಬೆಂಗಳೂರು**



(ಮುಂದುವರೆದದ್ದು)

ಮಾನ್ಯ ಕೃ. ನರಹರಿಯವರು ವೃತ್ತಿಕ್ಷೇತ್ರದಲ್ಲಾಗಲೀ, ರಾಜಕೀಯ ಕ್ಷೇತ್ರದಲ್ಲಾಗಲೀ ಕಾರ್ಯ ನಿರ್ವಹಿಸುವಾಗ ತಮ್ಮ ನಿರ್ಭೀತ, ನಿಷ್ಪಕ್ಷಪಾತ, ನ್ಯಾಯಸಮ್ಮತ ನಡೆಗಳಿಂದ ಎಂದೂ ಕಿಂಚಿತ್ತೂ ಹಿಂದೆ ಸರಿದಿರಲಿಲ್ಲ. ಅದು ಅವರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಅಷ್ಟೇ ಅಲ್ಲ, ಅವರನ್ನು ಬಲ್ಲವರೆಲ್ಲರಿಗೂ ಚೆನ್ನಾಗಿಯೇ ತಿಳಿದಿತ್ತು. ಅಂತಹ ಹಲವು ಸ್ವಾರಸ್ಯಕರ ಪ್ರಸಂಗಗಳನ್ನು ಅವರ ಮೂಲಕವೇ ತಿಳಿಯುವ ಪ್ರಯತ್ನವಿಲ್ಲಿದೆ.

ಕಾಲೇಜಿನಲ್ಲಿ ಮಾನ್ಯ ಕೃ. ನರಿಹರಿಯವರು ಉಪನ್ಯಾಸಕರಾಗಿದ್ದಾಗ ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಸಹೋದ್ಯೋಗಿಗಳಿಗೆ ಹಾಗೂ ಆಡಳಿತಮಂಡಳಿಯವರೆಲ್ಲರಿಗೂ ಪ್ರಿಯರಾಗಿದ್ದರು. ಅದಕ್ಕೆ ಕಾರಣ ಅವರ ಪ್ರಾಮಾಣಿಕತೆ, ನ್ಯಾಯನಿಷ್ಠುರ ನಡವಳಿಕೆಗಳು, ಜೊತೆಗೆ ಅವರ ಶಿಸ್ತುಬದ್ಧ ಕಾರ್ಯವೈಖರಿ.

ಸರ್ ಯಾವುದೇ ಕ್ಷೇತ್ರದಲ್ಲಿ ಒಬ್ಬರು ಜನಪ್ರಿಯರಾದರೆಂದರೆ ಅಸೂಯೆಯಿಂದ ಅವರಿಗೆ ತೊಂದರೆ ಕೊಡುವವರು ಇದ್ದೇ ಇರುತ್ತಾರೆ. ಹಾಗೆಯೇ ನಿಮ್ಮ ಜನಪ್ರಿಯತೆಯನ್ನು ಸಹಿಸದವರು ನಿಮಗೆ ತೊಂದರೆ ಕೊಟ್ಟಿದ್ದರೆ? ಅನ್ಯಾಯದ ವಿರುದ್ಧ ಹೋರಾಡುವಾಗ ತಾವು ಮೇಲಾಧಿಕಾರಿಗಳನ್ನೂ ಎದುರು ಹಾಕಿಕೊಂಡ ಉದಾಹರಣೆ ಇದೆಯೇ?

"ಒಮ್ಮೆ ಬೇರೆ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದವರನ್ನು ಪ್ರೊಫೆಸರ್ ಆಗಿ ನೇಮಕ ಮಾಡಿದರು. ಅವರಿಗೆ ಮ್ಯಾನೇಜರ್ ಆಗಿಯೂ ಸ್ವಲ್ಪ ಹೆಚ್ಚಿನ ಜವಾಬ್ದಾರಿಯನ್ನು ಕೊಡಲಾಗಿತ್ತು. ಆ ಅಧಿಕಾರದ ದುರುಪಯೋಗವನ್ನು ಅವರು ಮಾಡಿಕೊಳ್ಳಲು ತೊಡಗಿದರು. ತಮ್ಮ ನಿಯಂತ್ರಣದಲ್ಲಿ ಎಲ್ಲರು ಇರಬೇಕೆಂದು ಅವರ ಅಪೇಕ್ಷೆಯಾಗಿತ್ತು. ಅದಕ್ಕಾಗಿ ಎಲ್ಲರ ತರಗತಿಗಳ ಬಳಿ ಹೋಗಿ ತರಗತಿ ತೆಗೆದುಕೊಳ್ಳುತ್ತಿದ್ದಾರೆಯೋ ಇಲ್ಲವೋ ಎಂದು ಪರೀಕ್ಷಿಸುವುದು, ಕೆಲವರು ತರಗತಿ ತೆಗೆದುಕೊಂಡಿಲ್ಲವೆಂದು ಸುಳ್ಳು ಬರೆದು ಕಾರಣ ನೀಡಲು ಅವರಿಗೆ ಒಂದು ನೋಟೀಸ್ ಕಳುಹಿಸುವುದು, ಹೀಗೆಲ್ಲಾ ಮಾಡುತ್ತಿದ್ದರು. ತಮ್ಮ ಬಗ್ಗೆ ಹೆದರಿಕೆಯಿರಲಿ ಎಂಬುದು ಅವರ ಉದ್ದೇಶವಾಗಿರುತ್ತಿತ್ತು. ಯಾರೂ ಅದನ್ನು ಪ್ರತಿಭಟಿಸದೆ ಮ್ಯಾನೇಜ್ಮೆಂಟಿನವರು ಏನು ತಿಳಿದುಕೊಳ್ಳುತ್ತಾರೋ ಎಂದು ದೂರು ಕೊಡದೇ ಮೌನವಾಗಿಯೇ ನೋವನ್ನನುಭವಿಸುತ್ತಿದ್ದರು. ನಾನು ಕೇಳುತ್ತಿದ್ದೆ, ನೀವೇಕೆ ತರಗತಿ ತೆಗೆದುಕೊಂಡಿದ್ದೇನೆ ಎಂದು ಬರೆದು ಕಳುಹಿಸುವುದಿಲ್ಲ? "ಏಕೆ ಹೆದರುತ್ತೀರಿ, ಸತ್ಯ ಹೇಳಿ" ಎಂದು. ಆದರೆ ಅವರು ಯಾರೂ ಧೈರ್ಯ ವಹಿಸುತ್ತಿರಲಿಲ್ಲ.

ಒಮ್ಮೆ ಈ ರೀತಿಯ ನೋಟೀಸ್ ನನಗೂ ಬಂತು. ನಾನು ತರಗತಿಯನ್ನು ತೆಗೆದುಕೊಂಡಿದ್ದರೂ ತೆಗೆದುಕೊಂಡಿಲ್ಲವೆಂದು ಆಪಾದಿಸಿ, ವಿವರಣೆ ಕೇಳಲಾಗಿತ್ತು. ನಾನು ಅದರಲ್ಲಿಯೇ ಉತ್ತರ ಬರೆದು ಕಳುಹಿಸಿದ್ದೆ. ಆ ನಂತರ ನನ್ನ ತಂಟೆಗೆ ಬರಲಿಲ್ಲವಾದರೂ ನನಗೆ ಅದನ್ನು ಹಾಗೇ ಬಿಡಬಾರದೆಂದೆನಿಸಿತು. ಯಾರು ಯಾರ ಮೇಲೆ ಸುಳ್ಳು ಆಪಾದನೆಯನ್ನು ಹೊರಿಸಲಾಗಿತ್ತೋ ಅವರೆಲ್ಲರ ಹೆಸರುಗಳನ್ನು ಪಟ್ಟಿ ಮಾಡಿಕೊಂಡೆ. ಮುಂದೆ ಸುಪ್ರಿಂಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಸನ್ಮಾನ್ಯ ಶ್ರೀ ಎಂ.ಎನ್ ವೆಂಕಟಾಚಲಯ್ಯನವರು ಆಗ ನಮ್ಮ ಕಾಲೇಜಿನ ಆಡಳಿತಮಂಡಳಿಯ ಸದಸ್ಯರೂ ಆಗಿದ್ದರು. ಆಗ ಅವರು ಒಬ್ಬ ಅಡ್ವೊಕೇಟ್ ಆಗಿದ್ದರಷ್ಟೇ. ಅವರ ಸಮಯವನ್ನು ಪಡೆದುಕೊಂಡು ಹೋಗಿ, ವೈಜಿ ಕೃಷ್ಣಸ್ವಾಮಿಯವರು ಮಾಡುತ್ತಿದ್ದುದನ್ನೆಲ್ಲಾ ತಿಳಿಸಿ, ತಮ್ಮ ಮಾತನಷ್ಟೇ ನಂಬಬೇಕಿಲ್ಲವೆಂದೂ, ಬೇರೆ ಬೇರೆ ಕಡೆಗಳಿಂದ ವಿಷಯದ ಸತ್ಯಾಸತ್ಯತೆಯನ್ನು ತಿಳಿದು ಸಮಸ್ಯೆಗೆ ಪರಿಹಾರ ದೊರಕಿಸಿಕೊಡಬೇಕೆಂದೂ ಹೇಳಿದೆ. ಎಲ್ಲವನ್ನೂ ಕೇಳಿದ ಅವರು 'ನಿಮ್ಮ ಮಾತನ್ನು ಸಂಪೂರ್ಣವಾಗಿ ನಂಬುತ್ತೇನೆ. ನಾನು ಅಗತ್ಯ ಕ್ರಮ ಕೈಗೊಳ್ಳುತ್ತೇನೆ' ಎಂದು ಹೇಳಿಬಿಟ್ಟರು. ಮುಂದಿನ ಗವರ್ನಿಂಗ್ ಕೌನ್ಸಲ್ ಮೀಟಿಂಗ್‌ನಲ್ಲಿ ವೈ.ಜಿಕೆ ಯವರನ್ನು ಮ್ಯಾನೇಜರ್ ಹುದ್ದೆಯಿಂದ ತೆಗೆದುಹಾಕಲಾಗಿತ್ತು. ಅವರು ಕೇವಲ ಪ್ರೊಫೆಸರ್ ಆಗಿ ಉಳಿದಿದ್ದರು. ಅದಾದ ನಂತರ ಅವರಿಗೆ ನನ್ನನ್ನು ಕಂಡರೆ ಏನೋ ಒಂದು ಬಗೆಯ ಭಯ ಇರುತ್ತಿತ್ತು. ಆದರೂ ಅಸಮಾಧಾನವಿತ್ತಲ್ಲ, ಮೊತ್ತೊಂದು ರೀತಿಯಲ್ಲಿ ನನ್ನಲ್ಲಿ ತಪ್ಪು ಹುಡುಕಲು ಯತ್ನಿಸಿದ್ದರು.

ನಾವು ಮೂರು ಬಗೆಯ ರಿಜಿಸ್ಟರ್‌ಗಳನ್ನು ನಿರ್ವಹಿಸಬೇಕಾಗಿತ್ತು. ಒಂದು ವಿದ್ಯಾರ್ಥಿಗಳ ಹಾಜರಾತಿಯದು, ಎರಡನೆಯದು ಅವರ ಅಂಕಗಳ ವಿವರವನ್ನು ದಾಖಲಿಸಿರುವುದು ಮತ್ತೊಂದು ಪ್ರತಿನಿತ್ಯ ನಾವು ತೆಗೆದುಕೊಂಡಿದ್ದ ತರಗತಿಗಳಲ್ಲಿ ಮಾಡಿದ್ದ ಪಠ್ಯ ವಿಷಯದ ವಿವರವನ್ನು ಹೊಂದಿರುವಂತಹುದು. ಒಮ್ಮೆ ಈ ಮೂರನ್ನೂ ಒಪ್ಪಿಸಬೇಕೆಂದು ನನಗೆ ಮಾತ್ರ ಹೇಳಿಕಳುಹಿಸಿದ್ದರು. ಅದರಲ್ಲಿ ಏನಾದರೂ ತಪ್ಪು ಕಂಡುಹಿಡಿಯುವುದು ಅವರ ಉದ್ದೇಶವಾಗಿತ್ತು. ನಾನು ಎಲ್ಲವನ್ನೂ ಅಚ್ಚುಕಟ್ಟಾಗಿ ಸಿದ್ಧವಾಗಿಟ್ಟಿರುತ್ತಿದ್ದೆ. ಅವುಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದವನೊಡನೆ ಹೇಳಿಕಳುಹಿಸಿದ್ದೆ, "ಇವುಗಳಲ್ಲಿ ಯಾವುದರ ಮೇಲಾದರೂ ಒಂದೇ ಒಂದು ರಿಮಾರ್ಕ್ ಬರೆದರೆ ನಾನು ಅವರನ್ನು ಬಿಡುವುದಿಲ್ಲ. ಹೀಗೆಂದು ಹೇಳು ಅವರೊಂದಿಗೆ. ಏಕೆಂದರೆ ನನ್ನ ಆ ಮೂರು ರಿಜಿಸ್ಟರ್‌ಗಳನ್ನು ಅಷ್ಟು ಪಕ್ಕಾ ಆಗಿ ಇಟ್ಟಿರುತ್ತಿದ್ದೆ. ಒಂದು ವಾರ ಆತ ತನ್ನಲ್ಲಿ ಅವುಗಳನ್ನು ಇಟ್ಟುಕೊಂಡಿದ್ದು ನನಗೆ ಹಿಂತಿರುಗಿಸಿದ್ದರು. ಯಾವುದರಲ್ಲಿಯೂ ಒಂದು ಗೆರೆಯೂ ಹಾಕಿರಲಿಲ್ಲ. ಆಮೇಲೆ ನಿಧಾನವಾಗಿ ನನ್ನನ್ನು ಓಲೈಸಲು ಆರಂಭಿಸಿದ್ದರು, ಯಾರೋ ಕೇಳಿದ್ದಾರೆ. ಟ್ಯೂಷನ್ ಬೇಕಂತೆ, ನಿಮಗೆ ಆಗುತ್ತಾ? ಎಂದು ಒಮ್ಮೆ ಕೇಳಿದರು. ನಾನು ಆಗಲಿ, ಯಾರನ್ನಾದರೂ ನನ್ನ ಬಳಿ ಕಳುಹಿಸಿ, ಆದರೆ ಒಂದು ಕಂಡೀಷನ್ ಮೇಲೆ. ನಾನು ಅವರಿಂದ ಶುಲ್ಕ ಅಥವಾ ಏನಾದರೂ ಗಿಫ್ಟ್ ತೆಗೆದುಕೊಳ್ಳುವುದಿಲ್ಲ. ಇದು ನಿಮಗೆ ಒಪ್ಪಿಗೆಯಾದರೆ ಮಾತ್ರವೇ ಕಳುಹಿಸಿ ಎಂದು ಹೇಳಿದ್ದೆ. ಆತನ ಮುಖ ಚಿಕ್ಕದಾಗಿತ್ತು. ನನಗೇನೋ ಉಪಕಾರ ಮಾಡಲು ಬಯಸುವಂತೆ ಕೇಳಿದ್ದವರಿಗೆ ನನ್ನ ಉತ್ತರ ನಿರೀಕ್ಷಿತವಾಗಿರಲಿಲ್ಲ. ಅವರು ಯಾರನ್ನೂ ಕಳುಹಿಸಲೂ ಇಲ್ಲ.

ಅನ್ಯಾಯದ ವಿರುದ್ಧ ಸೆಟೆದು ನಿಂತ ಮತ್ತೊಂದು ಘಟನೆ ನನಗೆ ನೆನಪಾಗುತ್ತಿದೆ. ಹಾಗೆ ಮಾಡುವಾಗ ನಾನು ಮೇಲಾಧಿಕಾರಿಯನ್ನೂ ಎದುರು ಹಾಕಿಕೊಂಡಿದ್ದೇನೆ. ನಮ್ಮಲ್ಲಿ ಒಬ್ಬರು ಅಕೌಂಟೆಂಟ್ ಇದ್ದರು. ನಮ್ಮಲ್ಲಿ ಯಾರಿಗೇ ಆದರೂ ಅರಿಯರ್ಸ್ ಬಂದರೆ ಅದನ್ನು ಬಿಲ್ ಮಾಡಿ ಕಳುಹಿಸಲು ಅವರಿಗೆ ಇಂತಿಷ್ಟೆಂದು ಪಾಲು ಕೊಡಬೇಕಿತ್ತು. ಎಲ್ಲರೂ ಮನಸ್ಸಿಲ್ಲದೆಯೇ

ಪುಟ 6 ಕ್ಕೆ ➢

➢ ಪುಟ 6 ರಿಂದ.....

ವಿರೋಧಿಸಲು ಧೈರ್ಯವಿಲ್ಲದೆಯೇ ಕೊಟ್ಟುಬಿಡುತ್ತಿದ್ದರು. ಇದು ನನಗೆ ಗೊತ್ತಾಯಿತು ಅದರಲ್ಲಿ ನಮ್ಮ ಪ್ರಿನ್ಸಿಪಾಲರೂ ಸೇರಿ ಅವರೂ ಕೊಡುತ್ತಿದ್ದರು. ಒಮ್ಮೆ ಮೀಟಿಂಗ್ ಸೇರಿದಾಗ ಕಡೆಯಲ್ಲಿ ನಾನು ಒಂದು ವಿಷಯ ಪ್ರಸ್ತಾಪಿಸಿ ಆ ಪದ್ಧತಿ ಸರಿಯಲ್ಲವೆಂದು ಹೇಳಿ, ಪ್ರಿನ್ಸಿಪಾಲರಾಗಿ ತಾವೇ ಅದನ್ನು ಬೆಂಬಲಿಸುತ್ತಿರುವುದು ಸರಿಯಲ್ಲವೆಂದು ಆಪಾದಿಸಿದೆ. ಮಾತಿಗೆ ಮಾತು ಬೆಳೆದು ನಾನು ಜೋರಾಗಿಯೇ ಅವರ ಅಭಿಪ್ರಾಯವನ್ನು ಖಂಡಿಸಿದೆ. ಗಲಾಟೆ ಹೊರಗೆ ನಿಂತಿದ್ದ ಶಿಕ್ಷಕರೆಲ್ಲರ ಕಿವಿಗೂ ಬಿತ್ತು. ಕಡೆಗೆ ಪ್ರಿನ್ಸಿಪಾಲರೇ ತಗ್ಗಿ ಒಪ್ಪಿಕೊಂಡು, ಮುಂದಿನ ದಿನಗಳಲ್ಲಿ ಆ ಕೆಟ್ಟ ಪದ್ಧತಿ ತಪ್ಪಿತು. ಪ್ರಿನ್ಸಿಪಾಲರಿಗೆ ಒಂದು ರೀತಿಯಲ್ಲಿ ನನ್ನನ್ನು ಕಂಡರೆ ಭಯವೂ, ಗೌರವವೂ ಉಂಟಾಗಿತ್ತು".

ಎಮರ್ಜೆನ್ಸಿ ಕಾಲದಲ್ಲಿ ತಮ್ಮ ಈ ವೃತ್ತಿಯ ಕಾರ್ಯಗಳಿಗೆ ಏನೂ ತೊಂದರೆಯಾಗಲಿಲ್ಲವೇ? ತಾವು ಸಂಘಕ್ಕೆ ಸೇರಿದವರೆಂಬ ವಿಷಯ ಕಾಲೇಜಿನಲ್ಲಿ ತಿಳಿದಿತ್ತೇ? ಆ ದಿನಗಳಲ್ಲಿ ತಮಗೇನೂ ಸಮಸ್ಯೆ ಬರಲಿಲ್ಲವೇ?

"ನಾನು ಸಂಘದವನೆಂಬ ವಿಷಯವನ್ನು ಎಲ್ಲರಿಗೂ ತಿಳಿಸಿದ್ದೆ. ನನಗೇನು ಭಯವಿರಲಿಲ್ಲ. ಸಾಮಾನ್ಯವಾಗಿ ನಾನು ಅವಧಿಗೆ ಒಂದು ತಿಂಗಳ ಮೊದಲೇ ನನ್ನ ಭಾಗದ ಪಠ್ಯ ವಿಷಯಗಳ ಬೋಧನೆ ಮುಗಿಸಿರುತ್ತಿದ್ದೆ. ಆ ಮೇಲೆ ವಿದ್ಯಾರ್ಥಿಗಳ ಸಂದೇಹ ಪರಿಹಾರಕ್ಕೆ ಅನುಕೂಲವಾಗುವಂತೆ ಪ್ರತಿದಿನವೂ ಕಾಲೇಜಿಗೆ ಹೋಗಿ ಹಾಜರಾತಿಯ ಸಹಿ ಹಾಕಿ ಕುಳಿತಿರುತ್ತಿದ್ದೆ. ವಿದ್ಯಾರ್ಥಿಗಳಿಗೆ ಯಾವ ತೊಂದರೆಯೂ ಆಗಲಿಲ್ಲ. ಇನ್ನು ತುರ್ತುಪರಿಸ್ಥಿತಿ ಹೇರಿದಾಗ ಬಹುತೇಕ ಎಲ್ಲ ಹಿರಿಯ ನಾಯಕರೂ ಕೇಶವಕೃಪಾದಲ್ಲಿರುತ್ತಿದ್ದರು. ಎಲ್ಲರನ್ನೂ ಬಂಧಿಸಿದ್ದರೂ, ನಾನು ಹೇಗೋ ತಪ್ಪಿಸಿಕೊಂಡು ಮನೆ ಸೇರಿಕೊಂಡಿದ್ದೆ. ನನ್ನನ್ನು ಹುಡುಕುತ್ತ ಮನೆಗೆ ಬರುವ ವಿಷಯ ತಿಳಿದು ರಾತ್ರಿಯೇ ಹಿಂಬಾಗಿಲಿನಿಂದ ಹೊರಟುಹೋಗಿದ್ದೆ. ಆಮೇಲೆ ಒಮ್ಮೆ ಕಾಲೇಜಿಗೂ ಹುಡುಕುತ್ತ ಬಂದಿದ್ದರೂ, ನಾನು ಪೋಲಿಸರಿಗೆ ಸಿಕ್ಕಿರಲಿಲ್ಲ. ಆ ದಿನಗಳಲ್ಲಿಯೇ ನನಗೆ ಕನಸಿನಲ್ಲಿ ನನ್ನ ತಂದೆಯವರು ಕಾಣಿಸಿಕೊಂಡು ದೇವರಮನೆಯ ಬಾಗಿಲಲ್ಲಿ ಕುಳಿತು ತೀರ್ಥ ಕೊಟ್ಟಿದ್ದರು. ಅದು ನನಗೆ ಆಶೀರ್ವಾದವೇ ಆಗಿತ್ತು. ಅಂತೂ ನಾನು ಪೋಲಿಸರಿಗೆ ಸಿಕ್ಕಿಹಾಕಿಕೊಳ್ಳಲಿಲ್ಲ".

ಆದರೆ ತಾವು ಸಂಘದವರಾಗಿ ಗುರುತಿಸಿಕೊಂಡು ಅದರ ಚಟುವಟಿಕೆಗಳಲ್ಲಿ ತೊಡಗಿದ್ದುದು ಎಲ್ಲರಿಗೂ ತಿಳಿದಿತ್ತಲ್ಲವೇ? ಅದರಿಂದ ತಮಗೆ ತೊಂದರೆಯಾಗಲಿಲ್ಲವೇ?

"ನನ್ನನ್ನು ಕೆಲಸದಿಂದ ಸಸ್ಪೆಂಡ್ ಮಾಡಬೇಕೆಂಬ ನೋಟೀಸ್ ಬಂದಿತ್ತು. ಆದರೆ ಕಾಲೇಜಿನವರು ಅದಕ್ಕೆ ಒಪ್ಪಿರಲಿಲ್ಲ. ನನ್ನನ್ನು ಬಿಟ್ಟುಕೊಡಲು ಅವರಿಗೆ ಮನಸ್ಸಿರಲಿಲ್ಲ. ಕಡೆಗೆ ಕೆಲವು ತಿಂಗಳುಗಳೇ ಕಳೆದ ಮೇಲೆ ಒಂದು ಕಮಿಟಿಯನ್ನು ಅದಕ್ಕಾಗಿಯೇ ಮಾಡಬೇಕಾಗಿ ಬಂದು. ಎಲ್ಲ ತೀರ್ಮಾನವಾಗಿ, ನನ್ನನ್ನು ಅನಿವಾರ್ಯವಾಗಿ ಕೆಲಸದಿಂದ ತೆಗೆದುಹಾಕಿದ ಆದೇಶ ಹೊರಡಿಸಿದರೂ ನನಗೆ ತೊಂದರೆಯಾಗದಂತೆ ನೋಟೀಸ್ ಬಂದ ದಿನವೇ ನನ್ನನ್ನು ತೆಗೆದುಹಾಕಲಾಯಿತೆಂದು ಹಳೇ ದಿನಾಂಕ ಹಾಕಿದ್ದರು. ಆಮೇಲೆ ಎಲ್ಲ ಪರಿಸ್ಥಿತಿ ಹದಕ್ಕೆ ಬಂದ ಮೇಲೆ ಡಿಸ್ಮಿಸ್ ಮಾಡಿದ್ದು ತಪ್ಪೆಂದು ನಾನು ಕೇಸ್ ಹಾಕಿ ಕೋರ್ಟ್ ಮೂಲಕ ನನಗೆ ಆ ಎರಡು ವರ್ಷಗಳು ಪೂರ್ಣ ವೇತನ ಬರುವಂತೆ ಆಗಿ ಸೀನಿಯಾರಿಟಿ ಕೊಟ್ಟು, ರಜೆಯ ಅನುಕೂಲವನ್ನೂ ಸೇರಿಸಿ ಮತ್ತೆ ನನ್ನನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ತೀರ್ಪು ನೀಡಿದ್ದರು.

ಆಗ ಬಿ.ಎಸ್ ನಾರಾಯಣರಾವ್ ಕಾಲೇಜಿನ ಛೇರ್ಮನ್ ಆಗಿದ್ದರು, ಬಹಳ ಸಜ್ಜನರು. ಅವರು ನಾನು ಮತ್ತೆ ಕಾಲೇಜಿಗೆ ಬರಲೇಬೇಕೆಂದೂ, ನಾನು ಅಲ್ಲಿಗೆ ಹೋದಮೇಲೆ ಕಾಲೇಜಿನ ಉದ್ಯೋಗಸ್ಥರಿಗೆಲ್ಲ ಬಹಳ ಸಂತೋಷವಾಗಿತ್ತು. ಅಲ್ಲಿನ ಒಟ್ಟಾರೆ ವಾತಾವರಣವೇ ವ್ಯವಸ್ಥಿತವಾಗಿದೆಯೆಂದೂ ಅಭಿಪ್ರಾಯಪಟ್ಟು ಮತ್ತೆ ನಾನು ಸೇರಲು ಸಹಕರಿಸಿದ್ದರು. ಮುಂದೆ 1984 ಮೇ ತಿಂಗಳವರೆಗೂ ನಾನು ಅಲ್ಲಿ ವೃತ್ತಿಯನ್ನು ಮುಂದುವರೆಸಿದೆ. ಆ ನಂತರದಲ್ಲಿ ನನಗೆ ಸಂಘದ ಕಡೆಯಿಂದ ಸೂಚನೆ ಬಂದಿತ್ತು. ಅದೇನೆಂದರೆ ಎಂ.ಎಲ್.ಸಿ. ಹುದ್ದೆಗೆ ನಡೆಯುವ ಚುನಾವಣೆಯಲ್ಲಿ ನಾನು ಶಿಕ್ಷಕರ ಕಡೆಯಿಂದ ಸ್ಪರ್ಧೆಗೆ ನಿಲ್ಲಬೇಕೆಂದು ಸಂಘದ ಯಾವುದೇ ಆದೇಶವನ್ನು ನಾನು ಪಾಲಿಸುತ್ತಿದ್ದೆ. ಹಾಗಾಗಿ ನಾನು ಸ್ಪರ್ಧಿಸಲು ಒಪ್ಪಿಕೊಂಡೆ. ಆದರೆ ಕೆಲವರು ನಾನು ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಚುನಾವಣೆಗೆ ನಿಲ್ಲುವುದು ಸರಿಯಿಲ್ಲವೆಂದು ಅಪಸ್ವರವೆತ್ತಿದ್ದರು. ಆಗ ನಾನು ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್‌ರವರ ಕಛೇರಿಗೆ ಹೋಗಿ ನಾನು ಕಾಲೇಜಿನಿಂದ ಸ್ವಯಂ ನಿವೃತ್ತಿ ಪಡೆಯಬೇಕೆಂದಿರುವೆನೆಂದೂ, ಚುನಾವಣೆಗೆ ನಿಲ್ಲಬೇಕಾಗಿದೆಯೆಂದೂ ತಿಳಿಸಿದೆ. ಅವರು ನನಗೆ ಚೆನ್ನಾಗಿ ಪರಿಚಿತರೇ ಆಗಿದ್ದರು, ಸತ್ಯನಾರಾಯಣಶೆಟ್ಟರು ಅಂತ. ಅವರು ಹಾಗೇನೂ ಇಲ್ಲವೆಂದೂ, ಸ್ವಯಂ ನಿವೃತ್ತಿ ತೆಗೆದುಕೊಳ್ಳಬೇಕಾಗಿಲ್ಲವೆಂದೂ ಹೇಳಿದರು. ಡೆಪ್ಯುಟಿ ಡೈರೆಕ್ಟರ್ ಕೃಷ್ಣಮೂರ್ತಿಯವರಂತೂ ಬಲವಾಗಿಯೇ ನನ್ನ ನಿರ್ಧಾರವನ್ನು ವಿರೋಧಿಸಿದ್ದರು. ಕಾಲೇಜಿನಲ್ಲಿ ಸಹ ಬಿ.ಎಸ್ ನಾರಾಯಣರಾವ್‌ಗೆ ನನ್ನನ್ನು ಬಿಟ್ಟುಕೊಡಲು ಮನಸ್ಸೇ ಇರಲಿಲ್ಲ. ಕಾಲೇಜಿಗೆ ಒಂದು ಶಿಸ್ತನ್ನು ತಂದುಕೊಟ್ಟುವನೆಂದು ನನ್ನ ಬಗೆಗೆ ಅಪಾರ ವಿಶ್ವಾಸ ಅವರಿಗೆ. ಅಂತೂ ಅವರನ್ನೆಲ್ಲಾ ಒಪ್ಪಿಸಿ ಸ್ವಯಂ ನಿವೃತ್ತಿ ಪಡೆದುಕೊಂಡು ನಾನು ಮೂರನೆಯ, ಕಡೆಯ ಚುನಾವಣೆ ಅರ್ಜಿಯನ್ನು ಸಲ್ಲಿಸಿದ್ದೆ. ಚುನಾವಣೆಯಲ್ಲಿ ಜಯವನ್ನೂ ಪಡೆದಿದ್ದೆ.


ನಿವೃತ್ತಿಯ ನಂತರ ವೇತನ ನಿಷ್ಕರ್ಷೆಗೆ ನನ್ನ ಸರ್ವಿಸ್ ರಿಜಿಸ್ಟರ್ ಡೈರೆಕ್ಟರ್ ಕಛೇರಿಗೆ ಕಳುಹಿಸಿದಾಗ ಅವರು ಯಾವುದೇ ವಿವರ ಸೇರಿಸಿ ಕಳುಹಿಸಲು ಮತ್ತೆ ಕಾಲೇಜಿಗೆ ಕಳುಹಿಸಿದ್ದಾಗ ನನ್ನ ಜನಪ್ರಿಯತೆಯನ್ನು ಸಹಿಸದೆ ಕಛೇರಿಯವರೊಬ್ಬರು ನನ್ನ ಸರ್ವಿಸ್ ಪುಸ್ತಕವನ್ನೇ ಕಳೆದುಬಿಟ್ಟಿದ್ದರು. ಏಕೆಂದರೆ ಕಾಲೇಜಿನಲ್ಲಿ ನನಗಿದ್ದ ಜನಪ್ರಿಯತೆ ಎಲ್ಲರ ಗಮನ ಸೆಳೆಯುತ್ತಿತ್ತು, ಅಸೂಯೆ ಕೂಡ ಮೂಡಿಸುತ್ತಿತ್ತು. ವಿದ್ಯಾರ್ಥಿಗಳಿಗೇ ಆಗಲೀ, ಉಪನ್ಯಾಸಕರಿಗೇ ಆಗಲಿ ಏನೇ ತೊಂದರೆ ಬಂದರೆ ನನ್ನ ಬಳಿಗೇ ಬರುತ್ತಿದ್ದರು. ಆಗ ನಾನು ಡೆಪ್ಯುಟಿ ಡೈರೆಕ್ಟರ್ ಕೃಷ್ಣಮೂರ್ತಿಯವರ ಬಳಿಗೇ ಹೋಗಿ ವಿಷಯ ತಿಳಿಸಿದಾಗ ಅವರು ಆ ಕೂಡಲೇ ಒಂದು ಹೊಸ ಸರ್ವಿಸ್ ಪುಸ್ತಕವನ್ನು ಸಿದ್ಧಪಡಿಸುವಂತೆ ಆದೇಶ ನೀಡಿದ್ದರು. ಏಕೆಂದರೆ ನಾನು ಅದೆಲ್ಲ ವಿವರವನ್ನು ಕೋರ್ಟಿನಲ್ಲಿ ಒಪ್ಪಿಸಬೇಕಾಗಿತ್ತು. ಅಂತೂ ಒಬ್ಬಿಬ್ಬರಿಂದ ಹೀಗೆ ಅಲ್ಪ ಸ್ವಲ್ಪ ತೊಂದರೆಗಳಾದರೂ ಒಟ್ಟಾರೆ ನನ್ನ ವೃತ್ತಿಜೀವನ ಚೆನ್ನಾಗಿಯೇ ಇತ್ತು.

ಒಟ್ಟಾರೆ ಕಾಲೇಜಿನ ವೃತ್ತಿಜೀವನದಲ್ಲಿ ಅಲ್ಲಿನ ಆಡಳಿತ ಮಂಡಳಿಯವರು, ಸಹೋದ್ಯೋಗಿಗಳು, ವಿದ್ಯಾರ್ಥಿಗಳು ಎಲ್ಲರ ಪ್ರೀತಿ, ವಿಶ್ವಾಸ, ಸಹಕಾರಗಳೂ ದೊರೆತುದು ನನಗೆ ಅಪಾರವಾದ ಸಂತೋಷ, ತೃಪ್ತಿ, ಸಮಾಧಾನವನ್ನು ತಂದಿದೆ. ಅಲ್ಲಿಂದ ಸ್ವಯಂ ನಿವೃತ್ತಿ ಪಡೆದ ಮೇಲೆ ನನ್ನ ಕಾರ್ಯಕ್ಷೇತ್ರದ ಚಟುವಟಿಕೆಗಳು ಬೇರೆಯದೇ ರೀತಿಯಲ್ಲಿ ಮುಂದುವರೆಯಿತು. ಆದರೂ ಈಗಲೂ ಬಿ.ಎಂ.ಎಸ್ ಕಾಲೇಜಿನ ಇಂದಿನ ವಿದ್ಯಾರ್ಥಿಗಳೂ ಸಹ ನನ್ನ ಹೆಸರನ್ನು ಅಲ್ಲಿಯ ಯಾವುದಾದರೊಂದು ಸಂದರ್ಭದಲ್ಲಿ ಸ್ಮರಿಸುವಂತಹ ಛಾಪನ್ನು ಮೂಡಿಸಿದ್ದೇನೆಂಬ ಮಾತುಗಳನ್ನು ಕೇಳಿದಾಗ ನನ್ನಲ್ಲಿ ಸಾರ್ಥಕತೆ ಉಂಟಾಗುತ್ತದೆ. ಶಿಕ್ಷಕವೃತ್ತಿಗೆ ಒದಗಿಸಿದ್ದೇನೆಂಬ ಸಮಾಧಾನವಾಗುತ್ತದೆ".

(ಮುಂದುವರೆಯುವುದು...)

ಜಡಕ್ಕೆ ಸ್ವಲ್ಪ ಶಕ್ತಿ ಇದ್ದರೆ ಆಲೋಚನೆ ಸರ್ವಶಕ್ತಿಯುಳ್ಳದ್ದು. – ವಿವೇಕಾನಂದ

# ಗಾಂಧಿ-ಶಾಸ್ತ್ರಿ ಪ್ರಸ್ತುತತೆ



**ಡಾ॥ ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**



ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಭಾರತ ರಾಷ್ಟ್ರ ಕಂಡ ಎರಡು ದೈತ್ಯ ಪ್ರತಿಭೆಗಳು. ಭಾರತ ಮಾತೆಯ ಹೆಮ್ಮೆಯ ಸುಪುತ್ರರು ಎಂದರೆ ಅತಿಶಯೋಕ್ತಿಯಲ್ಲ. ಇರ್ವರು ಸಹ ತಮ್ಮದೇ ಕಾರ್ಯಕ್ಷೇತ್ರಗಳಲ್ಲಿ ಧ್ರುವತಾರೆಗಳಂತೆ ಮಿನುಗಿದವರು. ಇಂದಿಗೂ ಇವರೀರ್ವರ ವಿಚಾರಧಾರೆ ಭಾರತವನ್ನು ಬೆಳಕಿನ ಸತ್ವದೆಡೆಗೆ ಮುನ್ನೆಡೆಸುತ್ತಿದೆ ಎಂದರೆ ಅದು ಉತ್ಪ್ರೇಕ್ಷೆಯಲ್ಲ.

ಇವರೀರ್ವರ ವ್ಯಕ್ತಿತ್ವದ ಗುಣವಿಶೇಷಗಳು ಜಗತ್ತಿನ ಪ್ರತಿಯೊಬ್ಬರನ್ನು ಸೂಜಿಗಲ್ಲಿನಂತೆ ಇಂದಿಗೂ ಆಕರ್ಷಿಸುತ್ತಿವೆ. ಬದುಕಿನ ಉತ್ಕೃಷ್ಟತೆಯನ್ನು ತಾವು ನಂಬಿದ್ದ ಮೌಲ್ಯ ಮತ್ತು ಆದರ್ಶಗಳಿಗನುಗುಣವಾಗಿ ಅನಾವರಣಗೊಳಿಸಿದರು. ಅತ್ಯುನ್ನತ ಜೀವನ ಕ್ರಮಕ್ಕಾಗಿ ಪ್ರಾಮಾಣಿಕವಾಗಿ ಬದುಕಿನುದ್ದಕ್ಕೂ ಹೋರಾಟ ಮತ್ತು ಸಂಘರ್ಷದ ಹಾದಿಯನ್ನು ಪರಿಪಾಲಿಸಿದರು. ಇರ್ವರು ತಮ್ಮ ವೈಯಕ್ತಿಕ ಜೀವನವನ್ನು ರಾಷ್ಟ್ರಸೇವೆಗೆ ಮುಡಿಪಿಟ್ಟರು. ಕೊನೆಯ ಉಸಿರಿನವರೆಗೂ ಭಾರತಮಾತೆಯ ಸೇವೆಗಾಗಿ ಹೆಣಗಾಡಿದರು. ರಾಷ್ಟ್ರಸೇವೆಯಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳಲಿಲ್ಲ ಹಾಗಾಗಿ ರಾಷ್ಟ್ರಕ್ಕಾಗಿ ಹುತಾತ್ಮರಾದರು. ಅವರ ಭೌತಿಕ ದೇಹ ಗತಿಸಿ ಹಲವು ದಶಕಗಳು ಉರುಳಿದರೂ ಅವರ ವಿಚಾರಧಾರೆ ಇಂದಿನ ಯುವ ಶಕ್ತಿಗೆ ಪ್ರೇರಣೆಯ ಮೂಲಮಂತ್ರವಾಗಿದೆ.

ಅಕ್ಟೋಬರ್ 2 ರಂದು ಮಹಾತ್ಮಗಾಂಧಿ ಮತ್ತು ಲಾಲಬಹದ್ದೂರ್ ಶಾಸ್ತ್ರಿಯವರ ಜನ್ಮದಿನ, ಒಂದೇ ದಿನಾಂಕ ಆದರೆ ವಿಭಿನ್ನ ಕಾಲಘಟ್ಟ, ರಾಜಕೀಯ ಪರಿಸ್ಥಿತಿ ಭಿನ್ನ, ಸಾಮಾಜಿಕ ಅಂತಸ್ತು ಎಲ್ಲವು ಬೇರೆ ಬೇರೆ ಆಗಿದ್ದರೂ ಸಹಿತ ಎಲ್ಲದನ್ನು ಬದಿಗೊತ್ತಿ ತಮ್ಮ ಶ್ರೇಷ್ಠತಮ ಗುಣವಿಶೇಷಣಗಳಿಂದ ಅವಿಚ್ಛಿನ್ನ ಪ್ರೇರಣೆಯ ಶಕ್ತಿಗಳಾಗಿ ಯುವ ಜನತೆಯ 'ಐಕಾನ್'ಗಳಾಗಿ ಇರುವುದು ಹೆಮ್ಮೆಯ ಸಂಗತಿಯೇ ಆಗಿದೆ.

ಈರ್ವರದ್ದು ಭಿನ್ನವಾದ, ವರ್ಣರಂಜಿತ ವ್ಯಕ್ತಿತ್ವ. ಗಾಂಧಿ ನಮಗೆ ಒಬ್ಬ ಸಮಾಜ ಸುಧಾರಕ, ರಾಜನೀತಿಜ್ಞ, ಅತ್ಯುತ್ತಮ ವಕೀಲ, ತತ್ವಶಾಸ್ತ್ರಜ್ಞ, ಶಿಕ್ಷಣತಜ್ಞ, ಸತ್ಯಾಗ್ರಹಿ, ಮಾನವ ಹಕ್ಕುಗಳ ಹೋರಾಟಗಾರ, ಅಹಿಂಸಾವಾದಿ, ಶಾಂತಿದೂತ, ಪ್ರವಾದಿಯಾಗಿ ಕಂಡುಬರುತ್ತಾರೆ. ಸತ್ಯ, ಧರ್ಮ, ಅಹಿಂಸೆಯನ್ನು ದೈವವೆಂದು ಜೀವಿತದುದ್ದಕ್ಕೂ ಪರಿಪಾಲಿಸಿ ನನ್ನ ಜೀವನವೇ ನನ್ನ ಸಂದೇಶವೆಂದು ಹೇಳಿ ತಮ್ಮ ಜೀವನದ ತೆರೆದ ಪುಸ್ತಕವನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಈ ಕಾರಣಕ್ಕೆ ಗಾಂಧಿ ಇಂದಿಗೂ ನಮಗೆ ಪ್ರಸ್ತುತವೆನಿಸುತ್ತಾರೆ.

ಲಾಲ್ ಬಹದ್ದೂರ್ ಶಾಸ್ತ್ರಿಯವರು ಸ್ವಾತಂತ್ರ್ಯ ಭಾರತದ ಎರಡನೆಯ ಪ್ರಧಾನಮಂತ್ರಿಯಾಗಿ ಮಾಡಿದ ರಾಷ್ಟ್ರಸೇವೆ, ಸಮರ್ಪಣಾಭಾವದ ಕರ್ತವ್ಯನಿಷ್ಠೆ, ಪ್ರಮಾಣಿಕತೆ, ಸತ್ಯಸಂಧತೆ, ದಿಟ್ಟತನ ಎಂತಹವರನ್ನು ಸಹ ಮೂಕವಿಸ್ಮಿತರನ್ನಾಗಿಸುತ್ತದೆ. ಶಾಸ್ತ್ರಿಜಿಯವರ ವ್ಯಕ್ತಿತ್ವದ ಇಂತಹ ಗುಣವಿಶೇಷಗಳು ಇಂದಿನ ಪೀಳಿಗೆಗೆ ದಾರಿದೀಪವಾಗಬೇಕು ಅದರಲ್ಲೂ ಪ್ರಸಕ್ತ ರಾಜಕೀಯ ನೇತಾರರಿಗೆ ಆದರ್ಶವಾಗಬೇಕು.

ಪ್ರಸಕ್ತ ರಾಜಕೀಯ ವ್ಯಕ್ತಿಗಳು ತಮ್ಮನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳಬಯಸಿದರೆ ಅವರಿಗೆ ಇವರೀರ್ವರು ಮಾದರಿಗಳಾಗಬೇಕು.

ಗಾಂಧಿ– ಶಾಸ್ತ್ರೀಜಿಯವರು ಬದುಕಿನುದ್ದಕ್ಕೂ ಯಾವುದೇ ಹಗರಣ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರದ ಮೋಹ, ಕುಟುಂಬ ರಾಜಕಾರಣ, ಅನ್ಯೆತಿಕತೆಯನ್ನು ಪುರಸ್ಕರಿಸಲಿಲ್ಲ. ಇವರುಗಳು ತಮ್ಮ ಬದುಕಿನಲ್ಲಿ ಎಷ್ಟೇ ಸಮಸ್ಯೆ ಮತ್ತು ಸವಾಲುಗಳು ಎದುರಾದರೂ ತಾವು ನಂಬಿದ ಮೌಲ್ಯಗಳನ್ನು ಬಲಿಕೊಡಲಿಲ್ಲ. ಬದಲಾಗಿ ತಮ್ಮ ಸಾಮಾನ್ಯ ಬದುಕನ್ನೇ ಮೌಲ್ಯವನ್ನಾಗಿ ಮನ್ವಂತರಗೊಳಿಸಿದ ಪುಣ್ಯಾತ್ಮರು. ತಾವು ನಂಬಿದ್ದ ಮೌಲ್ಯಗಳಿಗಾಗಿ ತಮ್ಮ ಬದುಕನ್ನೇ ಒಂದು ಪ್ರಯೋಗವನ್ನಾಗಿ ಮಾಡಿ ತಾವು ನೊಂದು, ಸೊರಗಿ, ರಾಷ್ಟ್ರಕ್ಕೆ ಯಶಸ್ಸು ದೊರಕಿಸಿಕೊಟ್ಟರು. ಒಬ್ಬ ಸಾಮಾನ್ಯ ವ್ಯಕ್ತಿ ಹೇಗೆ ಅಸಮಾನ್ಯನಾಗಬಹುದು ಎಂಬುದನ್ನು ಸಾಕ್ಷೀಕರಿಸಿದರು. ಈ ರಾಷ್ಟ್ರದಲ್ಲಿ ಹುಟ್ಟಿ ಹೀಗೂ ಬದುಕಬಹುದು ಎಂಬುದಕ್ಕೆ ಜೀವಂತ ಉದಾಹರಣೆಯಾದರು.

ಅಂದಿನ ಬ್ರಿಟೀಷ್ ಆಳ್ವಿಕೆಯಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದ ಆಗರ್ಭ ಶ್ರೀಮಂತ ಕುಟುಂಬದಿಂದ ಬಂದ ಗಾಂಧಿಯವರು ವಿದೇಶದಲ್ಲಿ ಬ್ಯಾರಿಷ್ಟರ್ ಪದವಿ ಪಡೆದಿದ್ದರೂ ಸಹಿತ ಭಾರತ ಮಾತೆಯ ಮುಕ್ತಿಗಾಗಿ ಎಲ್ಲವನ್ನು ಪರಿತ್ಯಾಗ ಮಾಡಿದರು. ಎಲ್ಲರೂ ಪಡೆಯುವುದರಲ್ಲಿ ಶ್ರೀಮಂತರಾದರೆ ಗಾಂಧಿ ತ್ಯಜಿಸುವುದರಲ್ಲಿ ಶ್ರೀಮಂತರಾದರು. ಶ್ರೀಮಂತಿಕೆಯಿಂದ ಬದುಕುವ ಎಲ್ಲ ಸೌಲಭ್ಯಗಳಿದ್ದರೂ ರಾಷ್ಟ್ರದ ಪರಿಸ್ಥಿತಿ ಕಂಡು ಮಮ್ಮಲ ಮರುಗಿದರು. ಕೊನೆಗೆ 'ಸಂತ' ರಾದರು. ಈ ಕಾರಣದಿಂದ ಗಾಂಧಿ ನಮಗೆ ಸದಾ ಅನುಕರಣಪ್ರಾಯರು. ತಮ್ಮ ಬಿಡುವಿಲ್ಲದ ಸಾರ್ವಜನಿಕ ಜೀವನದಲ್ಲಿ ಅಸಂಖ್ಯಾತ ವಿಚಾರಧಾರೆಗಳನ್ನು ನೀಡಿ ರಾಷ್ಟ್ರದ ಅಭಿವೃದ್ಧಿಗೆ ತಾತ್ವಿಕ ಬುನಾದಿಯ ಮೇಲ್ಪಂಕ್ತಿಯನ್ನು ಹಾಕಿದರು. ಆದರ್ಶವಾದಿ

**ಪುಟ 9 ಕ್ಕೆ ➤**

# ಭಾರತೀಯ ಇತಿಹಾಸದ ವಿಕೃತೀಕರಣ

(ಮುಂದುವರೆದದ್ದು)

ಸಾಮಾನ್ಯ ಪಾಳೆಗಾರನಂತಿದ್ದ ಪುರೂರವನ ಪ್ರಚಂಡ ಪರಾಕ್ರಮಕ್ಕೆ ತತ್ತರಿಸಿದ್ದ ಆಕ್ರಮಣಕಾರೀ ಅಲೆಗ್ಜಾಂಡರ್ ಮತ್ತು ಅವನ ಸೈನಿಕರು ತಮ್ಮ ಮನೋಬಲವನ್ನೇ ಕಳೆದುಕೊಂಡು ಭಾರತದ ಸಾಮ್ರಾಜ್ಯವನ್ನು ಆಕ್ರಮಿಸುವ ಸಾಹಸವನ್ನೇ ಮಾಡಲಿಲ್ಲ. ಇಷ್ಟಾದರೂ ಆಂಗ್ಲರು ಅಲೆಗ್ಜಾಂಡರನನ್ನು 'ವಿಶ್ವವಿಜೇತಾ' ಎಂಬ ಬಿರುದುಕೊಟ್ಟು ಕೊಂಡಾಡಿದರು.

ಯುದ್ಧ ಕೌಶಲ್ಯದಲ್ಲಿ ಶ್ರೇಷ್ಠಮಟ್ಟದ ಮುತ್ಸದ್ಧಿತನವನ್ನು ಪ್ರಕಟಿಸಿದ ಶೀಲವಂತ ಶೂರ ಛತ್ರಪತಿ ಶಿವಾಜಿಯು ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲೂ ಶತ್ರುಗಳಿಗೆ ಮಣ್ಣು ಮುಕ್ಕಿಸಿ ತನ್ನ ವಿಜಯವನ್ನು ಪ್ರತಿಷ್ಠಾಪಿಸಿದನು. ಆದರೆ ಆಂಗ್ಲ ಇತಿಹಾಸಕಾರರು ಪಠ್ಯವಸ್ತುವಿನಲ್ಲಿ ಶಿವಾಜಿಯ ಯಾವ ಹಿರಿಮೆಯನ್ನು ಗುರುತಿಸದೆ ಆತನನ್ನು 'ಬೆಟ್ಟದ ಇಲಿ' ಎಂದು ಹೆಸರಿಸಿದರು. ಶಿವಾಜಿಯ ಪೌರುಷ, ಸಾಹಸ, ರಾಜಕೀಯ ಮುತ್ಸದ್ದಿತನ ಹಾಗೂ ಯುದ್ಧ ಕೌಶಲ್ಯಗಳು ಆಗ ಪ್ರಕಟವಾಗದಿದ್ದಲ್ಲಿ ಇಡೀ ಭಾರತ ತನ್ನತನವನ್ನೇ ಕಳೆದುಕೊಂಡು ಇಸ್ಲಾಂ ಆಕ್ರಮಣಕ್ಕೆ ಪೂರ್ಣವಾಗಿ ತುತ್ತಾಗಿಬಿಡುತ್ತಿತ್ತು. ಈ ಮೇಲಿನೆರಡು ಸಂಗತಿಗಳು ಉದಾಹಣೆಗಾಗಿ ಮಾತ್ರ.

ನಾವು ಮೈಸೂರು ಅರಸರ ಸಿಂಹಾಸನವನ್ನು ಈಗಲೂ ನೋಡಬಹುದು. ಆದರೆ ಸುಮಾರು ಮುನ್ನೂರು ವರ್ಷಗಳ ಕಾಲ ದೆಹಲಿಯಲ್ಲಿ ಆಡಳಿತ ನಡೆಸಿದ ಮೊಘಲರ ಸಿಂಹಾಸನ ಈಗ ಕಾಣಸಿಗುವುದಿಲ್ಲ. ಮಹಾರಾಷ್ಟ್ರದಿಂದ ಸದಾಶಿವರಾವ್ ಭಾವೂ ನೇತೃತ್ವದಲ್ಲಿ ಹಿಂದು ಸೈನ್ಯವೂ ಉತ್ತರ ಭಾರತದ ಬಹುಭಾಗಗಳು ಮತ್ತು ಆಫ್ಘಾನಿಸ್ಥಾನದವರೆಗಿನ ಭೂಪ್ರದೇಶವನ್ನು ಪರಕೀಯರಿಂದ ಸ್ವತಂತ್ರಗೊಳಿಸಿತ್ತು. ಆ ಸಮಯದಲ್ಲಿ ದೆಹಲಿಯ ಮೊಘಲ್ ಸಿಂಹಾಸನವನ್ನು ಚೂರು ಚೂರು ಮಾಡಿ ಅದರಲ್ಲಿದ್ದ ಚಿನ್ನ, ಬೆಳ್ಳಿಗಳನ್ನು ಟಂಕಶಾಲೆಗೆ ಕಳುಹಿಸಿ, ನಾಣ್ಯಗಳನ್ನು ತಯಾರಿಸಿ ಸೈನಿಕರ ವೇತನವನ್ನು ವಿತರಿಸಲಾಯಿತು. ಇಂತಹ ಪರಾಕ್ರಮದ ಹಾಗೂ ಗೆಲುವಿನ ಘಟನೆಗಳು ನಮ್ಮ ಇತಿಹಾಸದಲ್ಲಿ ಎಷ್ಟೋ ಇವೆ. ಕೇವಲ ಸೋಲನ್ನೇ ಅನುಭವಿಸಿದ್ದರೆ ನಾವೂ ಸಹ ಈಜಿಪ್ಟ್ ಗ್ರೀಸ್, ಇರಾನ್‌ಗಳಂತೆ ಮೂಲ ಸಂಸ್ಕೃತಿಯನ್ನೇ ಕಳೆದುಕೊಳ್ಳಬೇಕಾದ್ದಿತು. ಪರಕೀಯ ಆಕ್ರಮಣಗಳ ವಿರುದ್ಧದ ದೀರ್ಘ ಸಂಘರ್ಷದಂತೆ ದೊಡ್ಡ ಪ್ರಮಾಣದಲ್ಲಿ ನಮ್ಮ ಪ್ರತಿರೋಧ ಶಕ್ತಿಯೂ ಪ್ರಕಟವಾಗಿದೆ. ಇಷ್ಟಾದರೂ ಆಂಗ್ಲರ ಕುತಂತ್ರ ಮಾತ್ರ ನಾವು ಸೋಲುವುದಕ್ಕೇ ಹುಟ್ಟಿರುವವರು ಎಂಬ ಮಾನಸಿಕತೆಯನ್ನು ನಮ್ಮಲ್ಲಿ ನಿರ್ಮಿಸುವುದೇ ಆಗಿತ್ತು.

6. ಆಂಗ್ಲರು ಮಾಡಿದ ಇನ್ನೊಂದು ದುಷ್ಟ ಪ್ರಯತ್ನವೆಂದರೆ ಭಾರತದ ಇತಿಹಾಸವನ್ನೇ ವಿಕೃತಗೊಳಿಸಿದ್ದು. ಥಾಮಸ್ ಎಡ್ವರ್ಡ್ ಎಂಬ ಕ್ರೈಸ್ತ ಮತ ಪ್ರಸಾರಕನು ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿಯಲ್ಲಿ 1886ರ ಏಪ್ರಿಲ್ 9ನೇ ದಿನಾಂಕದಂದು, ಭಾರತಕ್ಕೆ ಆರ್ಯರ ಆಕ್ರಮಣದ ಸುಳ್ಳು ಸಿದ್ಧಾಂತವನ್ನು ಪ್ರಥಮ ಬಾರಿಗೆ ಮಂಡಿಸಿ ಅಂದು ಇದರ ದುರುಪಯೋಗದ ಬಗ್ಗೆ ಮಾತ್ರ ಸಭೆಯಲ್ಲಿ ಚಿಂತಿಸಬೇಕು ಎಂದೂ ಆಗ್ರಹಿಸಿದ. ನಂತರ ಮದ್ರಾಸಿನ (ಈಗಿನ ಚೆನ್ನೈ) ಬಿಷಪ್ ಕಾಲ್ಡ್‌ವೆಲ್ ಎಂಬುವನು 'Comparative Grammer of Dravidian Languages' ಎಂಬ ಪ್ರಬಂಧವನ್ನು ಸೃಷ್ಟಿಸಿ ಆರ್ಯರು ಮತ್ತು ದ್ರಾವಿಡರು– ಇವರು ಬೇರೆ ಬೇರೆ ಜನಾಂಗ ಎಂದು ಪ್ರತಿಪಾದಿಸಿದ. ಆಂಗ್ಲ ಇತಿಹಾಸಕಾರರು ಈ ಸುಳ್ಳು ಸಿದ್ಧಾಂತಗಳನ್ನೇ ಆಧಾರವಾಗಿ ಇಟ್ಟುಕೊಂಡು ನಮ್ಮ ಇತಿಹಾಸ ಪಠ್ಯಪುಸ್ತಕಗಳನ್ನು ಬರೆದರು. ಆರ್ಯರ ವಲಸೆಗೆ ಮುನ್ನ ಭಾರತಾದ್ಯಂತ ಇದ್ದ ದ್ರಾವಿಡರ ಮೇಲೆ ಆರ್ಯರು ಆಕ್ರಮಣ ಮಾಡಿ ಅವರ ನಾಗರೀಕತೆ, ಸಂಸ್ಕೃತಿಗಳನ್ನು ನಷ್ಟ ಮಾಡಿ, ದ್ರಾವಿಡರನ್ನು ದಬ್ಬಾಳಿಕೆಯಿಂದ ದಕ್ಷಿಣ ಭಾರತಕ್ಕೆ ತಳ್ಳಿ ಮೂಲೆಗುಂಪಾಗಿ ಮಾಡಿದ್ದಾರೆ ಎಂದು ಇವರು ಪ್ರಚಾರ ಮಾಡಿದರು. ಇವರ ದುಷ್ಟ ಪ್ರಚಾರವನ್ನು ಜನಜನಿತ ಮಾಡಲು ಆಂಗ್ಲರು ಜಸ್ಟಿಸ್ ಪಾರ್ಟಿ ಎಂಬ ಪಕ್ಷವನ್ನು ಹುಟ್ಟು ಹಾಕಲು ಪ್ರೋತ್ಸಾಹಿಸಿ ಅದನ್ನು ಪೋಷಿಸಿದರು. ಆರ್ಯರು(?) ಮತ್ತು ಉತ್ತರ ಭಾರತದ ಜನಗಳ ವಿರುದ್ಧ ದಕ್ಷಿಣ ಭಾರತದ ಜನಗಳನ್ನು ಎತ್ತಿಕಟ್ಟುವುದು, ಭಾರತದ ಎಲ್ಲರ ಶ್ರದ್ಧಾ ಕೇಂದ್ರವಾಗಿರುವ ರಾಮಾಯಣ, ಮಹಾಭಾರತ, ಶ್ರೀರಾಮ, ಶ್ರೀಕೃಷ್ಣ ಇವರೆಲ್ಲಾ ಆರ್ಯರಿಂದ ನಿರ್ಮಿತ, ಇವೆಲ್ಲದರ ವಿರೋಧ ಮಾಡಿ ಆರ್ಯರ ದಬ್ಬಾಳಿಕೆಯ ವಿರುದ್ಧ ಹೋರಾಟ ಮಾಡುವುದು ಈ ಸಿದ್ಧಾಂತವೇ ಜಸ್ಟಿಸ್ ಪಾರ್ಟಿಯ ವೈಚಾರಿಕ ನಿಲುವಾಗಿತ್ತು. ಸ್ವಾತಂತ್ರ್ಯ ನಂತರ ಈ ಜಸ್ಟಿಸ್ ಪಾರ್ಟಿಯ ವಿಕೃತ ವಿಚಾರವನ್ನೇ ಹೊತ್ತು ದ್ರವಿಡ ಕಳಗಂ ಇತ್ಯಾದಿ ಪಕ್ಷಗಳು ಹುಟ್ಟಿಕೊಂಡವು ಎಂಬುದನ್ನು ಗಮನಿಸಬೇಕು.

ಆಂಗ್ಲರು ಈ ಸುಳ್ಳುಗಳನ್ನು ಸೃಷ್ಟಿಸಿ ಪೋಷಿಸಲು ಹಲವು ಕಾರಣಗಳಿವೆ. ಮೊದಲನೆಯದಾಗಿ ಆರ್ಯ ದ್ರಾವಿಡ ಎಂದು ನಮ್ಮನ್ನು ಒಡೆದು ನಾವು ಪರಸ್ಪರ ಜಗಳವಾಡುವಂತೆ ಮಾಡಿ ತಾವು ಈ ದೇಶವನ್ನು ನಿರಾತಂಕವಾಗಿ ಆಳುವುದು, ಎರಡನೆಯದಾಗಿ ಈ ದೇಶಕ್ಕೆ ಎಲ್ಲರೂ ಹೊರಗಿನಿಂದ ಬಂದವರೇ. ಶಕರು, ಹೂಣರು, ಕುಶಾನರು, ಆರ್ಯರು, ಮುಸಲ್ಮಾನರು ಮತ್ತು ಆಂಗ್ಲರು– ಇವರೆಲ್ಲಾ ಸಮಾನ ನೆಲಗಟ್ಟಿನ ಮೇಲೆ ನಿಂತಿರುವವರು. ಹಾಗಿರುವಾಗ ಆಂಗ್ಲರು ಮಾತ್ರ ಏಕೆ ದೇಶಬಿಟ್ಟು ಹೊರಗೆ ಹೋಗಬೇಕು? ಎಂದು ತಮ್ಮ ಅಸ್ತಿತ್ವವನ್ನು ರಕ್ಷಿಸಿಕೊಳ್ಳುವುದು. ಮೂರನೆಯದಾಗಿ ಆರ್ಯರು ಪೂರ್ವ ಯುರೋಪ್, ಮಧ್ಯ ಏಷ್ಯಾದಿಂದ ಬಂದವರು, ಅವರ ಅಲ್ಲಿನ ಭಾಷೆಯ ಅನೇಕ ಪದಗಳಿಗೆ ಮತ್ತು ಸಂಸ್ಕೃತ ಪದಗಳಿಗೆ ಸಮಾನತೆ ಇದೆ. ಈ ಪದಗಳೂ ಅಲ್ಲಿನ ಭಾಷೆಯ ಅನೇಕ ಪದಗಳಿಗೆ ಮತ್ತು ಸಂಸ್ಕೃತ ಪದಗಳಿಗೆ ಸಮಾನತೆ ಇದೆ. ಈ ಪದಗಳೂ ಅಲ್ಲಿಂದ ಬಂದ ಪದಗಳು, ಇಡೀ ಪ್ರಪಂಚಕ್ಕೆ ನಾಗರೀಕತೆ ಕಲಿಸಿದವರು ಯುರೋಪಿಯನ್ನರು (ಅವರ ವಸಾಹತುಗಳ ಮೂಲಕ) ಭಾರತಕ್ಕೂ ನಾಗರಿಕತೆ ಕಲಿಸಿದವರು ಯುರೋಪಿನವರೇ ಎಂದು ಹೇಳಿ ಯುರೋಪಿಯನ್ನರ ಹಿರಿಮೆಯನ್ನು ಸಾಧಿಸಿ ತೋರಿಸುವುದು. ನಾಲ್ಕನೆಯದಾಗಿ ಪರದೇಶದಿಂದ ಬಂದ ಆರ್ಯರು ನಿರ್ಮಿಸಿದ ಅನೇಕ ಆಚಾರ– ವಿಚಾರಗಳನ್ನು ಈ ಜನ ತಮ್ಮದಾಗಿ ಮಾಡಿಕೊಂಡಿದ್ದಾರೆ. ಈಗಲೂ ಹೊರಗಿನಿಂದ ಬಂದ ಆಂಗ್ಲರ ಆಚಾರ– ವಿಚಾರಗಳನ್ನು ತಮ್ಮದಾಗಿ ಮಾಡಿಕೊಳ್ಳಲು ಇಲ್ಲಿನ ಜನಗಳಲ್ಲಿ ಮಾನಸಿಕ ಒಪ್ಪಿಗೆಯನ್ನು ನಿರ್ಮಾಣ ಮಾಡುವುದು ಅವರ ಉದ್ದೇಶವಾಗಿತ್ತು.

ಪುಟ 6 ಕ್ಕೆ ➤

➤ ಪುಟ 7 ರಿಂದ.....

ತತ್ವಶಾಸ್ತ್ರಜ್ಞರಾಗಿ ದೇವರನ್ನು ಹುಡುಕುವುದರಲ್ಲಿ ಸಮಯ ವ್ಯರ್ಥ ಮಾಡದೆ ಸತ್ಯ, ಅಹಿಂಸೆ ಧರ್ಮವನ್ನು ದೇವರೆಂದು ಭಾವಿಸಿದರು. ಇವುಗಳನ್ನು ತಮ್ಮ ಕೊನೆಯ ಉಸಿರಿರುವವರೆಗೂ ಪರಿಪಾಲಿಸಿ ದೈವತ್ವಕ್ಕೆ ಏರಿದರು. ಭಾರತದ ಪುರೋಭಿವೃದ್ಧಿಗೆ ಪೂರಕವಾದ ದೇಶಿ ಶಿಕ್ಷಣ ಕ್ರಮವನ್ನು ಪ್ರತಿಪಾದಿಸಿದರು. ಗಾಂಧಿಯವರ ಪ್ರಕಾರ ಶಿಕ್ಷಣವೆಂದರೆ ಅದು ಕೇವಲ ಓದು ಬರಹ ಅಲ್ಲ, ಬದಲಿಗೆ ಮಗು ಹಾಗೂ ವ್ಯಕ್ತಿಯಲ್ಲಿನ ಅತ್ಯುತ್ತಮ ಅಂಶಗಳನ್ನು ಹೊರತೆಗೆಯುವುದಾಗಿದೆ ಎಂದಿದ್ದಾರೆ. ಮಾತೃಭಾಷೆಯಲ್ಲಿ ಶಿಕ್ಷಣ ಪ್ರತಿಯೊಬ್ಬರಿಗೂ ಸಿಗಬೇಕು. ಆಂಗ್ಲಮಾಧ್ಯಮ ಶಿಕ್ಷಣವು ಭಾರತೀಯರನ್ನು ಭಾರತದಲ್ಲಿ ವಿದೇಶಿಗರನ್ನಾಗಿ ಮಾಡಿದೆ. ಕಂಠಪಾಠ ಮತ್ತು ಗಿಳಿಪಾಠ ರೂಢಿಗತವಾಗಿ ಕಲಿಕೆ ಅಪೂರ್ಣವಾಗುತ್ತದೆ. ಚರ್ಚಾಪದ್ಧತಿ, ಮಾಡಿ– ಕಲಿ, ಪದ್ಧತಿಗಳು ಬೋಧನಾ ವಿಧಾನಗಳಾಗಬೇಕು ಎಂದಿದ್ದಾರೆ. ಗಾಂಧಿ ತಮ್ಮ ಸುಧೀರ್ಘ ಸಾರ್ವಜನಿಕ ಜೀವನದ ದೆಶೆಯಿಂದ ದೇಶದ ಉದ್ದಗಲಕ್ಕೂ ಸಂಚರಿಸಿ, ಭಾರತದ ಮಣ್ಣಿಗೆ ಒಗ್ಗುವ ಸ್ವದೇಶೀ ಶಿಕ್ಷಣ ನೀತಿಯಾದ 'ವಾರ್ಧಾ ಶಿಕ್ಷಣ' ಅಥವಾ 'ಮೂಲ ಶಿಕ್ಷಣ' (Basic Education) ದ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಿದರು. ಹಳ್ಳಿಗಳ ಉದ್ಧಾರದಿಂದ ಮಾತ್ರ ರಾಷ್ಟ್ರದ ಪ್ರಗತಿ ಎಂದು ಸಾರಿದರು. ಪ್ರತಿಯೊಂದು ಹಳ್ಳಿಗಳೂ ಸ್ವಾವಲಂಬಿತನ ಸಾಧಿಸಬೇಕು, ಗ್ರಾಮ ಸ್ವರಾಜ್ಯಗಳಾಗಬೇಕು, ಆರ್ಥಿಕವಾಗಿ ಸದೃಢತೆ ಗಳಿಸಬೇಕು ಎಂಬುದು ಅವರ ಕನಸಾಗಿತ್ತು. ಭಾರತವನ್ನು ಮತ್ತೊಮ್ಮೆ 'ರಾಮರಾಜ್ಯ' ಮಾಡಿ ಸರ್ವರು ಸುಖದಿಂದ ಜೀವಿಸುವಂತಾಗಬೇಕು ಎಂಬುದು ಅವರ ಆಶಯವಾಗಿತ್ತು. ಇಂತಹ ಅದ್ಭುತ ವಿಚಾರಧಾರೆಗಳಿಂದ ಗಾಂಧಿ ನಮಗೆ ಹೆಚ್ಚು ಪ್ರಸ್ತುತರೆನಿಸುತ್ತಾರೆ.

ಲಾಲ್ ಬಹದ್ದೂರ್ ಶಾಸ್ತ್ರಿಯವರು ಮಧ್ಯಮ ಸುಸಂಸ್ಕೃತ ಮನೆತನದಲ್ಲಿ ಹುಟ್ಟಿದರೂ ಸಹಿತ ಎಂದಿಗೂ ತಮ್ಮ ಬಡತನವನ್ನು ಶಪಿಸಲಿಲ್ಲ. ಬದಲಿಗೆ ನಿಷ್ಠೆ, ಸತ್ಯಸಂಧತೆ, ಪ್ರಾಮಾಣಿಕತೆಯಲ್ಲಿ ಆಗರ್ಭ ಶ್ರೀಮಂತರಾದರು. ಒಬ್ಬ ಸಾಮಾನ್ಯ ವ್ಯಕ್ತಿ ರಾಷ್ಟ್ರದ ಅತ್ಯಂತ ಪ್ರಭಾವಿ ಪ್ರಧಾನಿ ಹುದ್ದೆ ಏರಬಹುದು ಎಂಬುದಕ್ಕೆ ಸಾಕ್ಷಿಯಾದರು. ತಮ್ಮ ಘನವ್ಯಕ್ತಿತ್ವದಿಂದ ಪ್ರಧಾನಿ ಹುದ್ದೆಯ ಗೌರವವನ್ನು ಇಮ್ಮಡಿಗೊಳಿಸಿದರು. ಅಂದಿನ ಕಾಲಘಟ್ಟದ ಭಾರತದ ಬಡತನ ಕಂಡು ಮಮ್ಮಲ ಮರುಗಿದರು. ಈ ಕಾರಣದಿಂದ ವಾರದಲ್ಲಿ ಒಂದು ದಿನದ ಉಪವಾಸಕ್ಕೆ ಕರೆಕೊಟ್ಟರು. ಸ್ವಂತ ಮನೆ, ಸ್ವಂತ ಕಾರು ಇಲ್ಲದ ಪ್ರಧಾನಿ ಎಂದು ಇತರರಿಂದ ಮೂದಲಿಕೆಯನ್ನು ಕೇಳಿದಾಗಲೂ ತಾವು ನಂಬಿದ್ದ ಆದರ್ಶ ಮೌಲ್ಯಗಳನ್ನು ಬಲಿಕೊಡಲಿಲ್ಲ. ನೆಹರೂ ಸರ್ಕಾರದಲ್ಲಿ ರೈಲ್ವೆ ಮಂತ್ರಿಯಾಗಿದ್ದ ಸಂದರ್ಭದಲ್ಲಿ ನಡೆದ ರೈಲು ಅಪಘಾತದ ನೈತಿಕ ಹೊಣೆ ಹೊತ್ತು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಶ್ರೇಯಸ್ಸು ಲಾಲ್ ಬಹದ್ದೂರ್ ಶಾಸ್ತ್ರೀಜಿಯವರಿಗೆ ಸಲ್ಲುತ್ತದೆ. ಈ ಕಾರಣದಿಂದ ಶಾಸ್ತ್ರಿಯವರು ನಮಗೆ ಸದಾ ಆದರ್ಶಪ್ರಾಯರು.

ಪ್ರಸಕ್ತ ರಾಜಕೀಯದಲ್ಲಿನ ಪ್ರಮುಖ ಹುದ್ದೆಗಳಲ್ಲಿರುವವರು ಸಾಕಷ್ಟು ಹಗರಣ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಾಡಿ ಜೈಲಿಗೆ ಹೋದರು. ಹುದ್ದೆಯನ್ನು ಬಿಟ್ಟುಕೊಡದೆ ಸಮಾಜಕ್ಕೆ ಆಘಾತಕಾರಿ ಸಂದೇಶವನ್ನು ನೀಡುವವರ ಮಧ್ಯೆ ಶಾಸ್ತ್ರೀಜಿಯವರ ನಡತೆ ಮತ್ತು ನಡೆ ನಮಗೆಲ್ಲ ಮಾದರಿಯಾಗುತ್ತದೆ.

ಲಾಲ್ ಬಹದ್ದೂರ್ ಶಾಸ್ತ್ರೀಜಿಯವರು ಬದುಕಿನುದ್ದಕ್ಕೂ ಸರಳತೆ ಪ್ರಾಮಾಣಿಕತೆ ಮತ್ತು ನಿಷ್ಠೆಯ ಪ್ರತೀಕವಾಗಿದ್ದರು. ಎಷ್ಟೇ ಬಡತನ ಇದ್ದರೂ ಯಾವುದೇ ಐಷಾರಾಮಿತನ ತಮ್ಮ ಬದುಕಿಗೆ ಪ್ರವೇಶಿಸಲು ಬಿಡಲಿಲ್ಲ. ಭಾರತದ ರಾಜಕೀಯ ಇತಿಹಾಸದಲ್ಲಿ ಶಾಸ್ತ್ರೀಜಿಯವರ ಜೀವನ ಮತ್ತು ಮೌಲ್ಯಗಳನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು. ಇಂದಿನ ರಾಜಕೀಯ ಕ್ಷೇತ್ರದಲ್ಲಿ ಇರುವ ರಾಜಕಾರಣಿಗಳು ಹಾಗೂ ಭವಿಷ್ಯದಲ್ಲಿ ರಾಜಕೀಯ ಪ್ರವೇಶಿಸಬೇಕೆಂಬ ಯುವ ಮನಸ್ಸುಗಳು ಶಾಸ್ತ್ರೀಜಿಯವರ ವ್ಯಕ್ತಿತ್ವದ ಮಾದರಿ ಅನುಸರಿಸಿ ಅವರ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟರೆ ರಾಜಕೀಯ ಕ್ಷೇತ್ರವನ್ನು ಸ್ವಜನಪಕ್ಷಪಾತ, ಭ್ರಷ್ಟಾಚಾರ, ಅಕ್ರಮ ಸಂಪತ್ತು ಗಳಿಕೆ ಮುಂತಾದವುಗಳಿಂದ ಮುಕ್ತಗೊಳಿಸಿ ರಾಜಕೀಯ ಕ್ಷೇತ್ರವನ್ನು ಶುದ್ಧೀಕರಿಸಿ ಅದರ ಪಾವಿತ್ರ್ಯತೆಯನ್ನು ಪುನರ್ ಸ್ಥಾಪಿಸಬಹುದು.

ಗಾಂಧಿ– ಶಾಸ್ತ್ರೀಜಿ ಭಾರತದ ಅನನ್ಯ ವ್ಯಕ್ತಿತ್ವದ ಮೇರು ಪರ್ವತಗಳು. ಇವರೀರ್ವರ ಬದುಕಿನ ಆದರ್ಶಗಳನ್ನು ಇಂದಿನ ತಲೆಮಾರಿನವರು ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಮುಂಬರುವ ಪೀಳಿಗೆಯವರು ಈ ನೆಲದ ಪಾವಿತ್ರ್ಯತೆಯನ್ನು ಕಾಪಾಡಬೇಕೆಂದರೆ ಗಾಂಧಿ– ಶಾಸ್ತ್ರೀಜಿಯವರ ವ್ಯಕ್ತಿತ್ವದ ಮಾದರಿಗಳಾದಾಗ ಮಾತ್ರ ಸಾಧ್ಯ... ಆಗ ಮಾತ್ರ ಭಾರತ, ಭಾರತವಾಗಿ ಉಳಿಯಲು ಸಾಧ್ಯ.

●

➤ ಪುಟ 8 ರಿಂದ.....

ಆದರೆ ಈಗಂತೂ ಸರಸ್ವತಿ ನದಿಯ ಶೋಧದ ನಂತರ ಆರ್ಯ ಆಕ್ರಮಣದ ಸಿದ್ಧಾಂತವು ವೈಜ್ಞಾನಿಕವಾಗಿ ಪೂರ್ತಿ ಸುಳ್ಳು ಎಂದು ನಿಶ್ಚಿತವಾಗಿದೆ. ಅಮೇರಿಕದ ಬಾಹ್ಯಾಕಾಶ ಸಂಸ್ಥೆಯಾದ ನಾಸಾ ತನ್ನ ಬಾಹ್ಯಾಕಾಶ ನೌಕೆಯ ಮೂಲಕ ಮೊದಲು ಭಾರತದ ಸರಸ್ವತಿ ನದಿಯ ಅಸ್ತಿತ್ವವಿದ್ದುದರ ಬಗ್ಗೆ ಚಿತ್ರ ತೆಗೆಯಿತು. ಈ ನದಿಯು ಹಿಮಾಲಯದಲ್ಲಿ ಹುಟ್ಟಿ, ಸಿಂಧೂನದಿಗೆ ಸಮಾನಾಂತರವಾಗಿ ಹರಿದು ಕಚ್ ಭೂಪ್ರದೇಶದಿಂದ ಸಮುದ್ರವನ್ನು ಸೇರುತ್ತಿತ್ತು ಎಂದು ಆ ಚಿತ್ರವು ತೋರಿಸಿತು. ನಂತರ ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋ ಸಹ ಮೇಲಿನ ಆಧಾರದ ಮೇಲೆ ತನ್ನ ಬಾಹ್ಯಾಕಾಶ ನೌಕೆಗಳ ಮೂಲಕ ಸರಸ್ವತಿ ನದಿಯ ಹೆಚ್ಚಿನ ಚಿತ್ರಗಳನ್ನು ತೆಗೆದು ಈ ನದಿಯ ಪಾತ್ರ ಮತ್ತು ಹರಿಯುತ್ತಿದ್ದ ಮಾರ್ಗ ಮತ್ತು ಸ್ಥಳಗಳನ್ನು ಗುರುತಿಸಿತು. ನಂತರ ಪುರಾತತ್ವ ತಜ್ಞರು ಸರಸ್ವತೀ ನದಿಯ ಪಾತ್ರದಲ್ಲಿ 1500ಕ್ಕೂ ಹೆಚ್ಚು ಉತ್ಖನನ ಸ್ಥಾನಗಳನ್ನು ಗುರುತಿಸಿ ಹಲವೆಡೆ ಉತ್ಖನನಗಳನ್ನೂ ಮಾಡಿದರು. ಈ ಉತ್ಖನನದಲ್ಲಿ ಇವರಿಗೆ ಹೋಮಕುಂಡಗಳು ಹಾಗೂ ಇನ್ನೂ ಕೆಲವು ವಸ್ತು ಸಿಕ್ಕಿದವು. ಇದನ್ನು ವೈಜ್ಞಾನಿಕವಾಗಿ ಕಾರ್ಬನ್ ಡೇಟಿಂಗ್‌ಗೆ ಒಳಪಡಿಸಿ ಇವುಗಳು ಇದ್ದ ಕಾಲಮಾನವನ್ನು ಗುರುತಿಸಲಾಯಿತು. ಈ ವೈಜ್ಞಾನಿಕ ಸಂಶೋಧನೆಯ ಫಲಿತಾಂಶವಾಗಿ ಸರಸ್ವತೀ ನದಿಯ ಪಾತ್ರದಲ್ಲಿ ಸಿಕ್ಕಿದ ಹೋಮಕುಂಡಗಳು 5000 ವರ್ಷಗಳಿಂಗಿಂತ ಹಳೆಯದು ಎಂದು ಸಿದ್ಧವಾಯಿತು. ಆಂಗ್ಲ ಇತಿಹಾಸಕಾರರ ಪ್ರಕಾರ "ಭಾರತಕ್ಕೆ ಆರ್ಯರ ಆಕ್ರಮಣ 3500 ವರ್ಷಗಳ ಹಿಂದೆ ನಡೆಯಿತು. ವೇದಗಳ ರಚನೆ ಆರ್ಯರಿಂದ ಆಯಿತು ಮತ್ತು ಭಾರತದಲ್ಲಿ ಹೋಮ ಹವನಗಳು ಆರ್ಯರಿಂದ ಪ್ರಾರಂಭವಾಯಿತು." ಆದರೆ ಮೇಲಿನ ಸರಸ್ವತಿ ನದಿಯ ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಹೋಮಕುಂಡಗಳು 5000 ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿದ್ದವು ಎಂದು ಸಾಧಿತವಾಯಿತು. ಇದರ ಅರ್ಥ ಆರ್ಯರ ಆಕ್ರಮಣ ಕಪೋಲಕಲ್ಪಿತ ಅಥವಾ ಸುಳ್ಳು ಎಂದು ವೈಜ್ಞಾನಿಕವಾಗಿ ನಿಶ್ಚಯವಾಯಿತು. ಭಾರತದ ಹಿಂದಿನ ಯಾವ ಸಾಹಿತ್ಯದಲ್ಲೂ ಆರ್ಯ ಪದವನ್ನು ಜನಾಂಗ ಸೂಚಕವಾಗಿ ಉಪಯೋಗ ಮಾಡೇ ಇಲ್ಲ.

●

ಅಸೂಯೆಯೇ ಎಲ್ಲಾ ಗುಲಾಮರಲ್ಲಿರುವ ನಾಶಕಾರಕ ವಸ್ತು. – ವಿವೇಕಾನಂದ

# ದೈಹಿಕ ಪರಿಶ್ರಮ

■ ಶ್ವೇತಾದ್ರಿ
ನಿವೃತ್ತ ಮುಖ್ಯ ಶಿಕ್ಷಕರು

ಸಬರಮತಿ ಆಶ್ರಮದ ಸದಸ್ಯರು ದೇಶ ಸೇವೆಗಾಗಿ ತಾವು ಅರ್ಹರಾಗಿದ್ದು, ನಿರಂತರ ಪ್ರಯತ್ನದಲ್ಲಿ ನಿರತರಾಗಿರಬೇಕು ಹಾಗೂ ಸಾರ್ವತ್ರಿಕ ಒಳಿತಿನ ವಿಚಾರದಲ್ಲಿ ಅಸಂಗತನಾಗಿರಬಾರದು ಎಂಬ ಧ್ಯೇಯದೊಂದಿಗೆ ಅಹಮದಾಬಾದಿನ ಕೊಚರ್ಬ್ ಪ್ರದೇಶದ ಸಬರಮತಿ ನದಿಯ ದಡದಲ್ಲಿ ಗಾಂಧಿಯವರು ತಮ್ಮ ಅನುಯಾಯಿಗಳೊಂದಿಗೆ 1915ರ ಮೇ 25ರಂದು ಆಶ್ರಮವನ್ನು ಸ್ಥಾಪಿಸಿದರು. ಅಲ್ಲಿ ಅನುಸರಿಸಲಾಗುತ್ತಿದ್ದ ನಿಯಮಗಳಲ್ಲಿ ಕೆಲವನ್ನು ಇಲ್ಲಿ ಪರಿಚಯಿಸಲು ಪ್ರಯತ್ನಿಸಲಾಗಿದೆ.

**ದೈಹಿಕ ಪರಿಶ್ರಮ :** ವ್ಯಕ್ತಿಯಿಂದ ಸಮಾಜಕ್ಕೆ ಹಾಗೂ ಆ ವ್ಯಕ್ತಿಗೇ ಆಗುವ ಹಾನಿಯಿಂದ ರಕ್ಷಿಸಲು ಇರುವ ಏಕೈಕ ಮಾರ್ಗವೆಂದರೆ ವ್ಯಕ್ತಿಯು ದೈಹಿಕ ಪ್ರರಿಶ್ರಮದಿಂದ ತನ್ನ ಭೌತಿಕ ಅಸ್ತಿತ್ವವನ್ನು ಜೀವಂತವಾಗಿರಿಸುವುದು. ಯುಕ್ತವಾದ ಕಾರಣವಿಲ್ಲದೆ ದೈಹಿಕ ಸಾಮರ್ಥ್ಯವುಳ್ಳ ಯುವಕರು ತಮ್ಮ ಎಲ್ಲಾ ಕೆಲಸಗಳನ್ನೂ ತಾವೇ ನಿರ್ವಹಿಸತಕ್ಕದ್ದು ಹಾಗೂ ಬೇರೆಯವರಿಂದ ಸೇವೆಯನ್ನು ಪಡೆಯುವಂತಿಲ್ಲ. ಅಗತ್ಯ ಶಕ್ತಿ ಸಾಮರ್ಥ್ಯವಿರುವ ಪ್ರತಿಯೊಬ್ಬ ವ್ಯಕ್ತಿಯೂ ಜೊತೆಜೊತೆಗೇ ನೆನಪಿನಲ್ಲಿಡಬೇಕಾದ ಸಂಗತಿ – ಅಶಕ್ತರು, ವೃದ್ಧರು, ಮಕ್ಕಳು ಮತ್ತು ಖಾಯಿಲೆಯವರ ಸೇವೆ ಮಾಡಲೇಬೇಕಾದುದು ಕರ್ತವ್ಯ ಎಂಬುದು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಸಬರಮತಿ ಆಶ್ರಮದಲ್ಲಿ ಯಾವುದೇ ನೌಕರರನ್ನೂ ನೇಮಕ ಮಾಡಲಾಗುವುದಿಲ್ಲ. ಒಂದು ಪಕ್ಷ ಅನಿವಾರ್ಯವಾಗಿ ನೇಮಕ ಮಾಡಿದಲ್ಲಿ ಅವರನ್ನು ಯಜಮಾನ – ನೌಕರ ಎಂಬ ಭಾವನೆಯಿಂದ ನಡೆಸಿಕೊಳ್ಳುವಂತಿಲ್ಲ. ಬದಲಾಗುತ್ತಿರುವ ಈಗಿನ ಸಾಮಾಜಿಕ ಸನ್ನವೇಶದಲ್ಲಿ ಇಂದಿನ ಯುವಪೀಳಿಗೆಗೆ ಈ ವಿಚಾರ ಬಹಳಷ್ಟು ಆದರ್ಶಪ್ರಾಯವಾದುದು. ತನ್ನ ಸ್ವಂತ ಸುಖ–ಸಂತೋಷಗಳಲ್ಲಿ ತಲ್ಲೀನರಾಗಿ ತಮ್ಮ ಕುಟುಂಬದ ಹಿರಿಯರು, ಮಕ್ಕಳುಗಳನ್ನೇ ಕಡೆಗಣಿಸುತ್ತಿರುವ ಈ ಸಂದರ್ಭದಲ್ಲಿ ಸೇವೆಯ ಮಹತ್ವವನ್ನು ಈ ಮೂಲಕ ಗಾಂಧಿಯವರು ಪ್ರತಿಪಾದಿಸಿದ್ದು ಎಲ್ಲರೂ ಅನುಸರಿಸಲೇಬೇಕಾದ ಆದರ್ಶವಲ್ಲವೇ?

ಅಂತೆಯೇ ದುಡಿಮೆಯಲ್ಲಿ ನಿರತನಾದ ವ್ಯಕ್ತಿ ಸಹಜವಾಗಿಯೇ ಸಮಾಜಕ್ಕೆ ಅಹಿತವಾದ ವಿಷಯಗಳ ಬಗ್ಗೆ ಯೋಚಿಸುವುದಿಲ್ಲ. ಅಂತಹವರ ಮಾನಸಿಕ, ದೈಹಿಕ ಆರೋಗ್ಯವೂ ಉತ್ತಮ ವಾಗಿರುತ್ತದೆ. ಕನ್ನಡದ ಪ್ರಸಿದ್ಧ ಕವಿ ಎಂ. ಗೋಪಾಲಕೃಷ್ಣ ಅಡಿಗರು ಹೇಳುತ್ತಾರೆ : "ಏನಾದರೂ ಮಾಡುತಿರು ತಮ್ಮ ಸುಮ್ಮನಿರಬೇಡ" ಎಂದು. ಇನ್ನು ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕೆಂಬ ನಿಯಮವನ್ನು ಗಾಂಧೀಜಿಯವರು ತಮ್ಮ ಜೀವನದಲ್ಲಿ ಸ್ವತಃ ಪಾಲಿಸುತ್ತಿದ್ದರು. ಎಷ್ಟರಮಟ್ಟಿಗೆ ಎಂದರೆ ಶೌಚಾಲಯಗಳನ್ನೂ ತಾವೇ ಸ್ವಚ್ಛಮಾಡುವುದರ ಮೂಲಕ ಎಲ್ಲರಿಗೂ ಆದರ್ಶವಾಗಿದ್ದಾರೆ. ಶಿಕ್ಷಕರು ಹಾಗೂ ಹಿರಿಯರು ಆ ಬಗ್ಗೆ ಗಮನಹರಿಸಿ ಯುವಕರಿಗೆ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದರ ಮೂಲಕ ಅವರ ಸಬರಮತಿ ಆಶ್ರಮದ ಈ ನಿಯಮವನ್ನು ಪಾಲಿಸುವಂತೆ ಮಾಡಲು ಪ್ರಯತ್ನಿಸೋಣ. ●

# ಸೃಷ್ಟಿ

ಎಷ್ಟೊಂದು ಸುಂದರ ಈ ಸೃಷ್ಟಿ ಮಂದಿರ

ಚಿಲಿಪಿಲಿ ಹಕ್ಕಿ ಪಕ್ಷಿಗಳ ಗಾಣ
ಕಾಡು ಪ್ರಾಣಿಗಳ ಓಡಾಟದ ತಾಣ
ತಿರುಪತಿ ಬಳ್ಳಿಗಳ ತೋರಣ
ಶುದ್ಧ ಗಾಳಿಯ ಚೇತನ

ಋಷಿ ಮುನಿಗಳ ಆಶ್ರಮ
ಬಿಲ್ವಿದ್ಯೆ ಕಲಿಕೆಯ ಸಂಭ್ರಮ
ಜುಳು ಜುಳು ಹರಿಯುವ ಜೀವ ಜಲ
ಸಕಲ ಜೀವರಾಶಿಗಳಿಗೆ ಇದುವೇ ಬಲ

ಸೃಷ್ಟಿ ಸೌಂದರ್ಯ ವರ್ಣಿಸುವುದು ಅಪದಳ
ಇಲ್ಲಿ ಎಲ್ಲವೂ ಹೊಳೆಯುತ್ತಿದೆ ಫಳಫಳ
ಈ ಜಗ ಸೋಜಿಗ ತಿಳಿದಷ್ಟು ಮೋಜಿಗ

ವಿಸ್ಮಯ ಪ್ರಪಂಚದಾಟ
ಇದು ದೇವನೊಜುಮೆಯ ಕೂಟ
ನೋಡುವ ಚಿಕಿತ್ತಿಕ ದೃಷ್ಟಿ
ನೋಡಿದಷ್ಟು ಆಳ ಇದೆ ಸೃಷ್ಟಿ

ರಚನೆ : ಪಿ.ಡಿ ವಾಲೀಕಾರ
ಲಕ್ಕಸಕೊಪ್ಪ, ಗುಳೇದಗುಡ್ಡ, ಬಾಗಲಕೋಟೆ

# ಓದುಗರ ಸ್ಪಂದನೆ

**ಶಿಕ್ಷಕ ಸಮಾಚಾರ ಸಂಪಾದಕ ಮಂಡಳಿಗೆ ನನ್ನ ಅಭಿನಂದನೆಗಳು ಸೆಪ್ಟಂಬರ್ ಸಂಚಿಕೆಯಲ್ಲಿ ಬಂದ ಎಲ್ಲಾ ಲೇಖನಗಳು ಉತ್ತಮವಾಗಿವೆ. 'ಬೆನ್ನು ತಟ್ಟಿ ಬೆಳೆಸಿದ ಗುರುಗಳು' ಎಂಬ ಶೀರ್ಷಿಕೆಯ ಲೇಖನವು ಅರ್ಥಪೂರ್ಣವಾಗಿದೆ. ಬೆಂಗಳೂರು ಎರಡೂ ಜಿಲ್ಲೆಯ ಪ್ರತಿಭಾ ಪುರಸ್ಕಾರಗಳು ನಿರಂತರವಾಗಿ ನಡೆಯುತ್ತಿರುವುದು ಶ್ಲಾಘನೀಯ ಈ ಪತ್ರಿಕೆಯನ್ನು ಓದಿದಾಗ ಪೂರ್ಣ ಮಾಹಿತಿಗಳು ಲಭಿಸಿತು.**

**– ಶ್ರೀಮತಿ ಜಿ. ಎನ್. ವಾಸುಕಿ,**
ಹಿರಿಯ ಕಾರ್ಯಕರ್ತೆ, ಮಾಧ್ಯಮಿಕ ಶಿಕ್ಷಕ ಸಂಘ

**ಶಿಕ್ಷಕ ಸಮಾಚಾರ ಪತ್ರಿಕೆಯು ಚೆನ್ನಾಗಿ ಮೂಡಿಬರುತ್ತಿದೆ. ಎಲ್ಲಾ ಲೇಖನಗಳು ಬಹಳ ಉಪಯುಕ್ತವಾಗಿವೆ.**

**– ಶ್ರೀ ಟಿ. ಆರ್. ಮಂಜುನಾಥ್,** ಕಾರ್ಯದರ್ಶಿ,
ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–4,

# ಅಭ್ಯಾಸ ವರ್ಗ – ಮಹತ್ವ

"ಅನಭ್ಯಾಸೇ ವಿಷಂ ವಿದ್ಯಾ" ಅನ್ನುವ ಮಾತಿನಂತೆ 'ಅಭ್ಯಾಸ' ಎಂಬುದಕ್ಕೆ ಮತ್ತೆ ಮತ್ತೆ ಪುನರಾವರ್ತನೆಯ ಕ್ರಿಯೆ ಎಂದು ಅರ್ಥೈಸಬಹುದು. ನಮ್ಮ ನಿತ್ಯ ಜೀವನದಲ್ಲಿಯೂ ಹತ್ತಾರು ಕ್ರಿಯೆಗಳು ಅಭ್ಯಾಸ ಕಾರಣದಿಂದಾಗಿ ಸದಾ ಸ್ಥಿರವಾಗಿ ನಿಲ್ಲುತ್ತವೆ. ಉದಾ– ಬೆಳಗಿನ ಸೂರ್ಯ ನಮಸ್ಕಾರ, ವಾಯುವಿಹಾರ ಇತ್ಯಾದಿ.

ಈ ಹಿನ್ನೆಲೆಯಲ್ಲಿ ನಮ್ಮ ಸಂಘದ ಕಾರ್ಯಕರ್ತರಿಗೆ ಆಗಾಗ ಅಭ್ಯಾಸ ವರ್ಗದ ಅವಶ್ಯಕತೆ ಇರುತ್ತದೆ. ಹಾಗಾದರೆ ಈ ಮುಂದಿನ ಕೆಲವು ಅಂಶಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವೇ ಈ ಲೇಖನ.

- ಅಭ್ಯಾಸ ವರ್ಗದ ಸ್ವರೂಪ.
- ಅಭ್ಯಾಸವರ್ಗದಲ್ಲಿ ಅಳವಡಿಸಲಾದ ಅಂಶಗಳು.
- ಅಭ್ಯಾಸ ವರ್ಗದ ಮಹತ್ವ.

ಈ ಬಗ್ಗೆ ನಾವು ಅವಲೋಕನ ಮಾಡುವುದಾದಲ್ಲಿ ಸಂಘದ ಕಾರ್ಯಕರ್ತರು ಸಂಘದ ತತ್ವ ಸಿದ್ಧಾಂತಗಳನ್ನು ಧ್ಯೇಯೋದ್ದೇಶಗಳನ್ನು ಚೆನ್ನಾಗಿ ಅರಿತು ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಈ ಅಭ್ಯಾಸವರ್ಗವು ಅತ್ಯಂತ ಸಹಕಾರಿಯಾಗುತ್ತದೆ. ಸಂಘದ ವಿಚಾರ ಧಾರೆಯ ಸ್ಪಷ್ಟತೆ, ಕಾರ್ಯ ಕೌಶಲ, ಬದ್ಧತೆ, ತ್ಯಾಗ ಮನೋಭಾವ, ಆಂತರಿಕ ಸಾಮರ್ಥ್ಯ ಸಂಪಾದನೆ, ಸದಾ ಗಮ್ಯಸ್ಥಾನದ ಬಗ್ಗೆ ಚಿಂತನೆ, ಉತ್ತಮ ಸಂಘಟನಾ ಕೌಶಲ ಮುಂತಾದ ಸಾರ್ಥಕ ಗುಣ ಧರ್ಮಗಳನ್ನು ಸಂಗ್ರಹಿಸಲು ಈ ಅಭ್ಯಾಸ ವರ್ಗವು ದಿಕ್ಸೂಚಿಯಾಗಿದೆ.

**ಅಭ್ಯಾಸ ವರ್ಗದ ಸ್ವರೂಪ :** ಅಭ್ಯಾಸ ವರ್ಗದ ಅವಧಿ – 2 ದಿನ, 3 ದಿನ ಅಥವಾ 5 ದಿನ ಹೀಗೆ ಸ್ಥಳೀಯ ಅನುಕೂಲತೆಗೆ ತಕ್ಕಂತೆ ನಡೆಯುತ್ತದೆ. ನಿಶ್ಚಿತ ಸ್ಥಳದಲ್ಲಿ ನಿರ್ದಿಷ್ಟ ಸಂಖ್ಯೆಯ ಕಾರ್ಯಕರ್ತರು ಸವಸತಿ ಶಿಬಿರದಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿಯ ಸಮಯ ಸಾರಿಣಿ ಅತ್ಯಂತ ವಿಶಿಷ್ಟವಾಗಿರುತ್ತದೆ. ಕ್ರಿಯಾ ಕಲಾಪಗಳು, ರಾತ್ರಿ ಔಪಚಾರಿಕ ಸಭೆಯೊಂದಿಗೆ (ಬೈಠಕ್) ಮುಕ್ತಾಯವಾಗುತ್ತದೆ. ಯಾವುದೇ ಕಾರಣಕ್ಕೂ ಕಾರ್ಯಕರ್ತ ಸ್ವಗೃಹಕ್ಕೆ ತೆರಳದೇ, ಸವಸತಿ ಶಿಬಿರದಲ್ಲಿ ಶಿಬಿರಾರ್ಥಿಯಾಗಿ ಪಾಲ್ಗೊಳ್ಳುವುದು ಈ ಅಭ್ಯಾಸ ವರ್ಗದ ವಿಶೇಷತೆ.

**ಅಭ್ಯಾಸವರ್ಗದಲ್ಲಿ ಅಳವಡಿಸಲಾದ ಅಂಶಗಳು :–** ಬೆಳಗಿನಿಂದ ಸಂಜೆಯವರೆಗೂ ಒಂದಾದ ಮೇಲೆ ಒಂದರಂತೆ ಅವಧಿಗಳು ನಡೆಯುತ್ತವೆ. ಪ್ರತಿ ಅವಧಿಯೂ ನಮಗೆ ಅತ್ಯಂತ ಪ್ರಭಾವ ಬೀರುವ ದೂರಗಾಮಿ ಸದುದ್ದೇಶ ಹೊಂದಿದ ಅಂಶಗಳನ್ನು ಒಳಗೊಂಡಿರುತ್ತದೆ.

ಪ್ರಸ್ತುತ ನಮ್ಮ ಶಿಕ್ಷಕ ಸಂಘದ ಸಂಘಟನೆಯ ಹಿನ್ನೆಲೆಯಲ್ಲಿ ಪರಾಮರ್ಶೆ ಮಾಡುವುದಾದರೆ

- ಸಂಘಟನೆ • ಸಮಯ ಪರಿಪಾಲನೆ • ಕಾರ್ಯಪದ್ಧತಿ • ಕಾರ್ಯಕೌಶಲ ಸಂಪಾದನೆ • ಭ್ರಾತೃತ್ವ ಭಾವನೆ
- ರಾಷ್ಟ್ರೀಯ ವಿಚಾರಧಾರೆ • ಸನಾತನ ಧರ್ಮದ ಪರಿಕಲ್ಪನೆ • ಭಾರತೀಯ ಪ್ರಾಚೀನ ಪರಂಪರೆಯ ಅರಿವು
- ಪೂರ್ವಜರ ಅಪಾರವಾದ ತ್ಯಾಗ ಮತ್ತು ಸಮಾಜಕ್ಕೆ ನೀಡಿದ ಕೊಡುಗೆ • ಸ್ವದೇಶಿ ಚಿಂತನೆ
- ಸಮಾಜದಲ್ಲಿ ಸಾಮರಸ್ಯ • ರಾಷ್ಟ್ರೀಯ ಭಾವೈಕ್ಯತೆ • ಭಾರತೀಯ ನೈಜ ಇತಿಹಾಸ
- ಶಿಕ್ಷಕನ ಆದರ್ಶಗುಣಗಳು • ರಾಷ್ಟ್ರ ಪುನರ್ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ

**ಅಭ್ಯಾಸ ವರ್ಗದ ಮಹತ್ವ :** ಸಂಘದ ಸ್ಥಾಪನೆ, ನಡೆದು ಬಂದ ದಾರಿ, ಹಿರಿಯರ ತ್ಯಾಗ, ಹಿರಿಯರು ಹಾಕಿಕೊಟ್ಟ ಮೇಲ್ಪಂಕ್ತಿ, ಸಂಘದ ವಾರ್ಷಿಕ ಕ್ರಿಯಾ ಯೋಜನೆ, ಕಾರ್ಯಕ್ರಮಗಳ ಯೋಚನೆ ಯೋಜನೆ ಅನುಷ್ಠಾನ, ಕಾರ್ಯಕರ್ತರ ಬೈಠಕ್, ಪ್ರತಿಯೊಬ್ಬ ಕಾರ್ಯಕರ್ತನು ಸಂಘದ ವಿವಿಧ ಚಟುವಟಿಕೆಗಳಲ್ಲಿ ತಾನು ತೊಡಗುವ ಮೂಲಕ ಅನ್ಯರಿಗೆ ಪ್ರೇರಣೆ ನೀಡುವುದು, ವಿವಿಧ ಶಾಲೆಗಳ ಭೇಟಿ, ಸದಸ್ಯತಾ ಅಭಿಯಾನ, ಗುರುವಂದನೆ, ಪ್ರತಿಭಾ ಪುರಸ್ಕಾರ ಮುಂತಾದ ಅತ್ಯುಪಯುಕ್ತ ವಿವಿಧ ಕಾರ್ಯಕ್ರಮಗಳ ಸಂಯೋಜನೆಗಳಿಗೆ ಅಭ್ಯಾಸ ವರ್ಗದ ಅಗತ್ಯವಿದೆ. ಅಭ್ಯಾಸ ವರ್ಗದಲ್ಲಿ ಭಾಗವಹಿಸಿದಾಗ ಈ ವರೆಗೆ ಪಡೆದುಕೊಂಡ ಅನುಭವದ ಹಾಗೂ ವಿಚಾರಗಳ ಪರಸ್ಪರ ವಿನಿಮಯ ಸಾಧ್ಯವಾಗುತ್ತದೆ. ಸಕಾರಾತ್ಮಕ ಚಿಂತನೆ, ಹೊಂದಾಣಿಕೆಯ ಮನೋಭಾವ, ಸಮೂಹ ನಿರ್ಣಯ, ನಿತ್ಯ ಜೀವನದಲ್ಲಿ ಸಂಘದ ಸಿದ್ಧಾಂತದ ಚೌಕಟ್ಟಿನಲ್ಲಿ ಆಚಾರ–ವಿಚಾರ–ಪ್ರಚಾರ ಈ ಮುಂತಾದ ರಚನಾತ್ಮಕ ಕ್ರಿಯೆಗಳಿಗೆ ಮನಸ್ಸು ಒಗ್ಗುವಂತೆ ಶಿಬಿರದಲ್ಲಿ ಮಾರ್ಗದರ್ಶನ ಲಭಿಸುತ್ತದೆ.


**ಅಭ್ಯಾಸ ವರ್ಗದ ಪ್ರಯೋಜನ :** ಸರ್ವತ್ರ ವಿಕಸಿತ ಭಾರತದ ಮಾತು ಕೇಳಿಬರುತ್ತಿದೆ. ಇದು ಸಾಕಾರವಾಗಲು ಶಿಕ್ಷಣವೇ ಭದ್ರ ಬುನಾದಿ. ಈ ಶಿಕ್ಷಣವನ್ನು ನೀಡುವವರು ಶಿಕ್ಷಕರು. ಆದ್ದರಿಂದ ಅಭ್ಯಾಸವರ್ಗದಲ್ಲಿ ಸಿಗುವ ವಿಶೇಷ ಶಿಕ್ಷಣವು (ತರಬೇತಿಯು) ನಮ್ಮಲ್ಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ. ಸಂಘಟನೆಯ ಬಗ್ಗೆ ಹೆಮ್ಮೆ, ಪ್ರೀತಿ, ಗೌರವ ಇಮ್ಮಡಿಯಾಗುತ್ತವೆ. ಕಾಲ ಕಾಲಕ್ಕೆ ಬರುವ ಸಂಘದ ಸೂಚನೆಗಳನ್ನು ಚಾಚೂ ತಪ್ಪದೇ ನಿರ್ವಹಿಸುವ ಮನೋಭಾವ ಹಾಗೂ ಇತರ ಸಂಘಟನೆಗಳಿಗಿಂತ ವಿಭಿನ್ನವಾಗಿ ಧ್ಯೇಯವಾದಿಗಳಾಗಿ ನಿಸ್ವಾರ್ಥ ಹಾಗೂ ಪ್ರಾಮಾಣಿಕ ಬುದ್ಧಿಯಿಂದ ಕಾರ್ಯಕರ್ತರು ಕ್ರಿಯಾಶೀಲನಾಗುತ್ತಾರೆ. ಈ ಅಭ್ಯಾಸವರ್ಗದಲ್ಲಿ ನೂತನ ಕಾರ್ಯಕರ್ತರ ಸೇರ್ಪಡೆಯೊಂದಿಗೆ ಸಂಘಟನೆಯನ್ನು ಹೆಮ್ಮರವಾಗಿ ಬೆಳೆಸುವ ದೃಢ ಸಂಕಲ್ಪವನ್ನು ಸ್ವೀಕರಿಸುತ್ತಾರೆ. ವೈಯಕ್ತಿಕ ಲಾಭ ನಷ್ಟಗಳನ್ನು ಲೆಕ್ಕಿಸದೇ ಸದೃಢ ಭಾರತ, ವಿಕಸಿತ ಭಾರತ, ಜಗದ್ಗುರು ಭಾರತ ಎಂಬ ದೂರದೃಷ್ಟಿಯತ್ತ ತನ್ನ ಚಿತ್ತವನ್ನು ತೊಡಗಿಸಿ ಅದಮ್ಯ ಉತ್ಸಾಹದಿಂದ ಕಾರ್ಯ ಕ್ಷೇತ್ರಕ್ಕೆ ಧುಮುಕುತ್ತಾರೆ.

"ಅದ್ವೇಷ್ಟಾ ಸರ್ವ ಭೂತಾನಾಂ ಮೈತ್ರಃ ಕರುಣ ಏವ ಚ। ನಿರ್ಮಮೋ ನಿರಹಂಕಾರಃ ಸಮ ದುಃಖ ಸುಖಃ ಕ್ಷಮೀ ॥"

ಎಂಬ ಗೀತೆಯ ವಚನದಂತೆ ಸಕಲ ಪ್ರಾಣಿಗಳಲ್ಲಿ ದಯೆ, ಮೈತ್ರಿ, ಕರುಣೆ ಹಾಗೂ ಸುಖ ದುಃಖಗಳನ್ನು ಸಮಭಾವದಿಂದ ಸ್ವೀಕರಿಸಿ, ಮಮತ್ವ (ತನ್ನದು ಎಂಬ ಭಾವ) ದಿಂದ ಹೊರಬಂದು ಅಹಂಕಾರ ರಹಿತ ಜೀವನ ಶೈಲಿಯನ್ನು ಬೆಳೆಸಿಕೊಳ್ಳುವ ಪ್ರತಿಜ್ಞೆಯೊಂದಿಗೆ ಪ್ರತಿಯೊಬ್ಬ ಕಾರ್ಯಕರ್ತರು ಅಭ್ಯಾಸ ವರ್ಗದಿಂದ ತೆರಳುವ ಹಾಗೆ ಮಾಡುವುದೇ ಇದರ ಪ್ರಮುಖ ಉದ್ದೇಶವಾಗಿರುತ್ತದೆ.

"ವಂದೇ ಭಾರತ ಮಾತರಮ್ "


– ನಾರಾಯಣ ಭಟ್ಟ
ಮುಖ್ಯ ಶಿಕ್ಷಕರು, ಆನೇಕಲ್
ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-10-2024 Date of Posting 20th or 21st of every month Posted at Periodical Rate

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆ
# ಒಂದು ದಿನದ ಸಹಲ್ ಕಾರ್ಯಕ್ರಮ






ದಿನಾಂಕ: 16–09–2024ರ ಸೋಮವಾರ ಬೆಳಿಗ್ಗೆ 6–45ಕ್ಕೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ, ಯಾದವಸ್ಮೃತಿಯಿಂದ ಕಾರ್ಯಾಲಯ ಪ್ರಮುಖರಾದ ಶ್ರೀ ಜೆ.ಎಂ ಜೋಷಿರವರ ಮಾರ್ಗದರ್ಶನದಲ್ಲಿ ಬೆಂಗಳೂರು ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪ, ಉತ್ತರ ಜಿಲ್ಲೆ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ.ಜಿ ಕೂಡಗಿ, ಕಾರ್ಯದರ್ಶಿ ಶ್ರೀ ಹರಿದಾಸ್‌ರವರ ನೇತೃತ್ವದಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀ ಚಿದಾನಂದ ಪಾಟೀಲ್ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಭಟ್‌ರವರ ಸಹಯೋಗದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳ ಒಂದು ದಿನದ ಸಹಲ್ ಕಾರ್ಯಕ್ರಮಕ್ಕೆ ಉತ್ತಮವಾದ ವಾಹನದಲ್ಲಿ ಚಾಲನೆ ನೀಡಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರ ಉತ್ತಮ ನಿರೂಪಣೆಯೊಂದಿಗೆ ಜಿಲ್ಲಾ ಕಾರ್ಯದರ್ಶಿ ಹರಿದಾಸ್‌ರವರು ಪ್ರಾರ್ಥನೆ ನಡೆಸಿಕೊಟ್ಟರು. ಸಹಲ್‌ನಲ್ಲಿ ಭಾಗವಹಿಸಿದವರೆಲ್ಲರನ್ನೂ ಅಧ್ಯಕ್ಷರಾದ ಮಲ್ಲಿಕಾರ್ಜುನ ಕೂಡಗಿರವರು ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಕಾರ್ಯಕ್ರಮದ ವರದಿಯನ್ನು ಶ್ರೀ ಜೆ.ಎಂ ಜೋಷಿರವರು ನೀಡಿದರು. ಸಹಲ್‌ನಲ್ಲಿ ಭಾಗವಹಿಸಿದ್ದ ಶ್ರೀ ಚಿದಾನಂದ ಪಾಟೀಲ್, ಶ್ರೀನಾರಾಯಣ ಭಟ್ ಹಾಗೂ ಶ್ರೀ ಗಂಗಪ್ಪರವರು ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ, ಸಹಲ್‌ನ ಪ್ರಾಮುಖ್ಯತೆ, ಸತ್ಸಂಗ, ಸತ್ಕಾರ್ಯ, ಸಮ್ಮಿಲನದ ಬಗ್ಗೆ ವಿವರಿಸಿದರು. ಬಿಡದಿಯಲ್ಲಿ ಉಪಹಾರವನ್ನು ಸೇವಿಸಿ ನಿಸರ್ಗ ರಮಣೀಯ ರಾಮನಗರದ ರಾಮದೇವರ ಬೆಟ್ಟವನ್ನು ಸಂದರ್ಶಿಸಿದೆವು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಪದಾಧಿಕಾರಿಗಳು ಚಾರಣದೊಂದಿಗೆ ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತಾ ರಾಮದೇವರ ಬೆಟ್ಟವನ್ನು ಹತ್ತಿ ದೇವಾಲಯವನ್ನು ವೀಕ್ಷಿಸಿ ಸಂತೋಷದಿಂದ ಬೆಟ್ಟ ಇಳಿದು ದೊಡ್ಡ ಮಳೂರಿನ ಅಪ್ರಮೇಯ ದೇವಸ್ಥಾನ ವೀಕ್ಷಿಸಿ, ಅಂಬೆಗಾಲು ಕೃಷ್ಣನ ದರ್ಶನ ಪಡೆದು ಪುನೀತರಾದೆವು. ಅಪ್ರಮೇಯ ದೇವಸ್ಥಾನದಲ್ಲಿ ಮಧ್ಯಾಹ್ನದ ವಿಶೇಷ ಪ್ರಸಾದವನ್ನು ಸ್ವೀಕರಿಸಿ ನಂತರ ಮದ್ದೂರಿನ ಬಳಿಯಿರುವ ವೈದ್ಯನಾಥಪುರದಲ್ಲಿರುವ ಪುರಾತನ ವೈದ್ಯನಾಥೇಶ್ವರ ದೇವಾಲಯ ಸಂದರ್ಶಿಸಿದೆವು. ಎಲ್ಲಾ ಪದಾಧಿಕಾರಿಗಳು ಅಲ್ಲಿನ ನದಿಯ ಬಳಿ ತೆರಳಿ ನದಿಯ ವೀಕ್ಷಣೆ ಮಾಡಿ ಹಿಂದಿರುಗಿದೆವು.

ವೈದ್ಯನಾಥಪುರದಿಂದ ಶ್ರೀರೇವಣ ಸಿದ್ದೇಶ್ವರ ಬೆಟ್ಟವನ್ನು ಸಂದರ್ಶಿಸಿದೆವು. ಅಲ್ಲಿನ ಶಿಲೆಗಳ ರಮಣೀಯ ದೃಶ್ಯ ಮನಸೂರೆಗೊಳ್ಳುವಂತಿತ್ತು. ಬೃಹತ್ ಶಿಲೆಯ ಕೆಳಗೆ ನಿರ್ಮಿತಗೊಂಡಿರುವ ದೇವಾಲಯವನ್ನು ವೀಕ್ಷಿಸಿ ಅಲ್ಲಿನ ನಿಸರ್ಗದ ಮಧ್ಯೆ ತುಂತುರು ಮಳೆಯಲ್ಲಿ ಪದಾಧಿಕಾರಿಗಳ ಬೈಠಕ್ ಮಾಡಿದೆವು. ಒಂದು ದಿನದ ಸಹಲ್‌ನಲ್ಲಿ ಭಾಗವಹಿಸಿದ್ದ ಪದಾಧಿಕಾರಿಗಳೆಲ್ಲರೂ ತಮ್ಮ ಅನುಭವವನ್ನು ಎಲ್ಲರೊಂದಿಗೆ ಸಂತೋಷದಿಂದ ಹಂಚಿಕೊಂಡರು. ನಂತರ ಕೆಂಗಲ್‌ನಲ್ಲಿರುವ ಪ್ರಸಿದ್ಧವಾದ ಕೆಂಗಲ್ ಹನುಮಂತರಾಯನ ದರ್ಶನ ಪಡೆದು ಪುನೀತರಾದೆವು. ಬೆಂಗಳೂರಿಗೆ ವಾಪಸ್ ಬರುವ ಸಮಯದಲ್ಲಿ ಬಿಡದಿಯಲ್ಲಿ ಚಹಾವನ್ನು ಸೇವಿಸಿ ರಾತ್ರಿ 8–30ರ ಸಮಯದಲ್ಲಿ ಯಾದವಸ್ಮೃತಿಗೆ ವಾಪಸ್ಸಾದೆವು. ಎಲ್ಲ ಪದಾಧಿಕಾರಿಗಳು ತುಂಬಾ ಲವಲವಿಕೆಯಿಂದ, ಚೈತನ್ಯದಿಂದ ಭಾಗವಹಿಸಿ ಈ ರೀತಿಯ ವಿಶಿಷ್ಟ ಕಾರ್ಯಕ್ರಮಗಳ ಸ್ಫೂರ್ತಿಯನ್ನು ತುಂಬುತ್ತವೆ ಎಂದು ತಿಳಿಸಿದರು. ಈ ರೀತಿ ಒಂದು ದಿನದ ಸಹಲ್ ಕಾರ್ಯಕ್ರಮವು ಯಶಸ್ವಿಯಾಯಿತು.

ವರದಿ : ಗಂಗಾಧರ.ಎಂ.ವಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com